# ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ಅಧಿನಿಯಮ ೨೦೦೦

## ಪ್ರಕರಣಗಳ ಪಟ್ಟಿ

ಪ್ರಕರಣಗಳು:


೧. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

೨. ಪರಿಭಾಷೆಗಳು

೩. ವ್ಯವಸ್ಥಿತ ಅಪರಾಧಕ್ಕಾಗಿ ದಂಡನೆ

೪. ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನ ಪರವಾಗಿ ಲೆಕ್ಕ ಇಟ್ಟಿರುವ ಸಂತ್ತನ್ನು ಹೊಂದಿದ್ದಕ್ಕಾಗಿ ದಂಡನೆ

೫. ವಿಶೇಷ ನ್ಯಾಯಾಲಯಗಳು

೬. ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ

೭. ಇತರ ಅಪರಾಧಗಳ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ

೮. ಸರ್ಕಾರಿ ಅಭಿಯೋಜಕ

೯. ವಿಶೇಷ ನ್ಯಾಯಾಲಯದ ಕಾರ್ಯವಿಧಾನ ಮತ್ತು ಅಧಿಕಾರಗಳು

೧೦. ವಿಶೇಷ ನ್ಯಾಯಾಲಯಗಳ ಅಧಿವಿಚಾರಣೆಯು ಅಗ್ರತೆಯನ್ನು ಹೊಂದಿರತಕ್ಕದ್ದು

೧೧. ಮೊಕದ್ದಮೆಗಳನ್ನು ನಿಯತ ನ್ಯಾಯಾಲಯಗಳಿಗೆ ವರ್ಗಾಯಿಸಲು ಅಧಿಕಾರ

೧೨. ಅಪೀಲು

೧೩. ಸಕ್ಷಮ ಪ್ರಾಧಿಕಾರಿಯ ನೇಮಕ

೧೪. ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕ ತಡೆದು ಪ್ರತ್ಯೇಕಿಸುವಿಕೆಯನ್ನು ಅಧಿಕೃತಗೊಳಿಸುವುದು

೧೫. ಸೆಲ್ಲ್ಯುಲರ್ ಫೋನ್‌ಗಳ ಬಗ್ಗೆ ವಿಶೇಷ ಉಪಬಂಧಗಳು

೧೬. ಅಧಿಕೃತಗೊಳಿಸುವ ಆದೇಶಗಳ ಪರಿಶೀಲನೆಗಾಗಿ, ಪರಿಶೀಲನಾ ಸಮಿತಿಯ ರಚನೆ

೧೭. ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸುವುದಕ್ಕೆ ಹಾಗೂ ಅವುಗಳನ್ನು ಬಹಿರಂಗಪಡಿಸುವುದಕ್ಕೆ ನಿಷೇಧ

೧೮. ಸಾಕ್ಷ್ಯದ ವಿಶೇಷ ನಿಯಮಗಳು

೧೯. ಪೊಲೀಸ್ ಅಧಿಕಾರಿಗಳ ಮುಂದೆ ಮಾಡಿದ ಕೆಲವು ತಪ್ಪೊಪ್ಪಿಗೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು

೨೦. ಸಾಕ್ಷಿದಾರನ ಸಂರಕ್ಷಣೆ

೨೧. ಸ್ವತ್ತಿನ ಮುಟ್ಟುಗೋಲು ಮತ್ತು ಜಪ್ತಿ

೨೨. ಸಂಹಿತೆಯ ಕೆಲವು ಉಪಬಂಧಗಳನ್ನು ಮಾರ್ಪಾಡು ಮಾಡಿ ಅನ್ವಯಿಸುವುದು

೨೩. ೩ನೇ ಪ್ರಕರಣದ ಅಡಿಯಲ್ಲಿ ಅಪರಾಧಿಗಳ ಸಂಬಂಧದಲ್ಲಿ ಪೂರ್ವ ಭಾವನೆ

೨೪. ಒಂದು ಅಪರಾಧದ ಸಂಜ್ಞೇಯತೆ ಮತ್ತು ತನಿಖೆ

೨೫. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದ ಲೋಕ ನೌಕರರಿಗೆ ದಂಡನೆ

೨೬. ಅಧ್ಯಾರೋಹಿ ಪರಿಣಾಮಗಳು

೨೭. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

೨೮. [ತಡೆದು ಪ್ರತ್ಯೇಕಿಸುವ ಕ್ರಮಗಳ ವಾರ್ಷಿಕ ವರದಿ]

೨೯. [ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ]

೩೦. [ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ]

* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**೨೦೦೨ರ ಅಧಿನಿಯಮ ಸಂಖ್ಯೆ: ೧.–** ವ್ಯವಸ್ಥಿತ ಅಪರಾಧವು ನಮ್ಮ ಸಮಾಜಕ್ಕೆ ತೀವ್ರ ಹಾಗೂ ಗಂಭೀರ ಸ್ವರೂಪದ ಭಯವನ್ನುಂಟು ಮಾಡುವಂಥದ್ದಾಗಿದೆ. ಇದು ಯಾವುದೇ ರಾಷ್ಟ್ರಕ್ಕೆ ಸೀಮಿತವಾಗಿಲ್ಲ. ಇದಕ್ಕೆ ಬಾಡಿಗೆ ಕೊಲೆಗಡುಕರ, ನಿಷೇಧಿತ ಕಳ್ಳ ಸಾಗಾಣಿಕೆದಾರರ, ಮಾದಕ ವಸ್ತುಗಳ ಕಾನೂನು ಬಾಹಿರ ವ್ಯಾಪಾರಿಗಳು, ಭಾರೀ ಮೊತ್ತದ ಹಣ ಸುಲಿಗೆ ಅಪಹರಣಕಾರರು, ವ್ಯಾಪಾರ ಸಂಸ್ಥೆಗಳು ಮತ್ತು ವ್ಯಕ್ತಿಗಳಿಂದ ಸಂರಕ್ಷಣಾ ಧನ ವಸೂಲಿ ಮಾಡುವವರು ಮತ್ತು ಕಾನೂನು ಬಾಹಿರವಾಗಿ ಸಂಗ್ರಹಿಸಿದ ಸಂಪತ್ತಿನಿಂದ ಇದಕ್ಕೆ ಹಣ ದೊರೆಯುತ್ತದೆ. ವ್ಯವಸ್ಥಿತ ಅಪರಾಧಿಗಳು ಸಂಗ್ರಹಿಸಿದ ಕಾನೂನು ಬಾಹಿರ ಸಂಪತ್ತು ಎಷ್ಟೊಂದು ಭಾರೀ ಮೊತ್ತದ್ದಾಗಿದೆ ಎಂದರೆ, ಒಂದು ಹಂತದ ತರುವಾಯ ವ್ಯವಸ್ಥಿತ ಅಪರಾಧಿಗಳು ತಮ್ಮ ಧನ ಬಲದಿಂದ ಅಥವಾ ಭಯ ಅಥವಾ ಹೆದರಿಕೆಯಿಂದ ರಾಜ್ಯದ ಪ್ರಮುಖ ಸಂಸ್ಥೆಗಳ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಿದ್ದಾರೆ. ವಾಸ್ತವವಾಗಿ, ಅವರ ಅಪರಾಧಿಕ ಚಟುವಟಿಕೆಗಳು ರಾಜ್ಯದ ಅಸ್ತಿತ್ವಕ್ಕೆ ಸವಾಲಾಗಿವೆ. ನಮ್ಮ ರಾಷ್ಟ್ರದ ಹಾಗೂ ಅದೇ ರೀತಿಯಾಗಿ ವಿಶ್ವದ ಇತರ ರಾಷ್ಟ್ರಗಳ ಅನುಭವದಿಂದ ಕಂಡುಬರುವುದೇನೆಂದರೆ ಈ ವ್ಯವಸ್ಥಿತ ಅಪರಾಧಿಗಳ ಕೂಟಗಳು ಭಯ ತ್ಪಾದಕರ ತಂಡಗಳೊಂದಿಗೆ ಮತ್ತು ಮಾದಕ ವಸ್ತುಗಳ ಸಾಗಾಣಿಕೆದಾರರೊಡನೆ ಸಂಪರ್ಕವಿಟ್ಟುಕೊಂಡಿವೆ. ವ್ಯವಸ್ಥಿತ ಅಪರಾಧಿಗಳ ತಂಡಗಳು ನಮ್ಮ ನಗರಗಳಲ್ಲಿಯೂ ತಮ್ಮ ಚಟುವಟಿಕೆಗಳನ್ನು ನಡೆಸುತ್ತಿವೆ ಎಂಬುದು ತಿಳಿದು ಬಂದಿರುವುದರಿಂದ ಅವರ ಚಟುವಟಿಕೆಗಳನ್ನು ನಿಗ್ರಹಿಸುವುದು ತೀರ ಅವಶ್ಯಕವಾಗಿದೆ.

ವ್ಯವಸ್ಥಿತ ಅಪರಾಧಿಗಳ ನೀಚ ಕೃತ್ಯಗಳನ್ನು ನಿಗ್ರಹಿಸಲು ಅಥವಾ ನಿಯಂತ್ರಿಸಲು ಈಗ ಇರುವ ದಂಡನೆವಿಧಿಸುವ ಕಾನೂನುಗಳು ಮತ್ತು ನ್ಯಾಯ ನಿರ್ಣಯ ವ್ಯವಸ್ಥೆಗಳು ಸಾಕಷ್ಟಾಗಿಲ್ಲ ಆದ್ದರಿಂದ ರಾಜ್ಯದಲ್ಲಿ ವ್ಯವಸ್ಥಿತ ಅಪರಾಧಿ ನೀಚ ಕೃತ್ಯಗಳನ್ನು ನಿಗ್ರಹಿಸಲು ಒಂದು ಕಾನೂನನ್ನು ರಚಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ, ೨೦೦೦ ಇದು ಇತರ ವಿಷಯಗಳೊಂದಿಗೆ ಈ ಮುಂದಿನವುಗಳ ಬಗ್ಗೆ ಉಪಬಂಧಿಸುತ್ತದೆ, ಎಂದರೆ:

(i) "ವ್ಯವಸ್ಥಿತ ಅಪರಾಧ" ಮತ್ತು "ವ್ಯವಸ್ಥಿತ ಅಪರಾಧಿಗಳ ಕೂಟ" ಇವುಗಳನ್ನು ಪರಿಭಾಷಿಸುವುದು;

(ii) ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿ ವ್ಯವಸ್ಥಿತ ಅಪರಾಧ ಎಸಗಿದ್ದಕ್ಕಾಗಿ, ವ್ಯವಸ್ಥಿತ ಅಪರಾಧ ಮಾಡುವಲ್ಲಿ ಒಳಸಂಚು ನಡೆಸುವುದಕ್ಕಾಗಿ ಅಥವಾ ದುಷ್ಪ್ರೇರಿಸುವುದಕ್ಕಾಗಿ ಮತ್ತು ವ್ಯವಸ್ಥಿತ ಅಪರಾಧದಲ್ಲಿ ಒಳಗೊಂಡ ವ್ಯಕ್ತಿಗೆ ಆಶ್ರಯ ನೀಡುವುದಕ್ಕಾಗಿ ಶಿಕ್ಷೆ ವಿಧಿಸುವುದು;

(iii) ಅಪರಾಧಿ ಕೃತ್ಯಗಳಿಂದ ಪಡೆದುಕೊಂಡುದುದನ್ನು ಸ್ವಾಧೀನತೆಗಾಗಿ ಶಿಕ್ಷೆ ವಿಧಿಸುವುದು;

(iv) ಅಪರಾಧಗಳ ವಿಚಾರಣೆಗಾಗಿ ವಿಶೇಶ ನ್ಯಾಯಾಲಯದ ಸ್ಥಾಪನೆ ಮತ್ತು ವಿಶೇಶ ನ್ಯಾಯಾಲಯದ ಕಾರ್ಯವಿಧಾನ ಮತ್ತು ಅಧಿಕಾರಗಳು;

(v) ವೈರ್, ಎಲೆಕ್ಟ್ರನಿಕ್ ಅಥವಾ ಬಾಯಿ ಮಾತಿನ ಮೂಲಕವಾದ ಸಂಪರ್ಕವನ್ನು ತಡೆದು ಪ್ರತ್ಯೇಕಿಸಲು ಪ್ರಧಿಕಾರ ನೀಡುವುದು;

(vi) ಪ್ರಾಧೀಕರಿಸುವ ಆದೇಶದ ಪರಿಶೀಲನೆಗಾಗಿ ಪರಿಶೀಲನಾ ಸಮಿತಿಯ ರಚನೆ;

(vii) ನಿರ್ದಿಷ್ಟ ಸಂದರ್ಭಗಳಲ್ಲಿ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸುವುದನ್ನು ಮತ್ತು ಬಹಿರಂಗಪಡಿಸುವುದನ್ನು ನಿಷೇಧಿಸುವುದು ಮತ್ತು ಹಾಗೆ ಉಲ್ಲಂಘಿಸುವುದನ್ನು ಶಿಕ್ಷಾರ್ಹವೆಂದು ಪರಿಗಣಿಸುವುದು;

(viii) ಸಾಕ್ಷ್ಯದ ಸಂಬಂಧದಲ್ಲಿ ವಿಶೇಷ ನಿಯಮಗಳನ್ನು ಉಪಬಂಧಿಸುವುದು;

(ix) ಪೋಲೀಸ್ ಅಧಿಕಾರಿಯ ಮುಂದೆ ಮಾಡಿದ ಕೆಲವು ತಪ್ಪೊಪ್ಪಿಗೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕಾಗಿ ಉಪಬಂಧಿಸುವುದು;

(x) ಸಾಕ್ಷಿದಾರರಿಗೆ ಸಂರಕ್ಷಣೆ ಒದಗಿಸುವುದು;

(xi) ಪ್ರಸ್ತಾವಿತ ಅಧಿನಿಯಮದ ಅಡಿಯಲ್ಲಿ ಅಪರಾಧಗಳಿಗಾಗಿ ಅಪರಾಧ ನಿರ್ಣಯವಾದ ತರುವಾಯ ಸ್ವತ್ತಿನ ಜಫ್ತಿ ಮತ್ತು ಮುಟ್ಟುಗೋಲು ಹಾಕಿಕೊಳ್ಳುವುದಕ್ಕಾಗಿ ಉಪಬಂಧ ಕಲ್ಪಿಸುವುದು.

ಆನುಷಂಗಿಕವಾದ ಮತ್ತು ಪ್ರಾಸಂಗಿಕವಾದ ಇತರ ಉಪಬಂಧಗಳನ್ನು ಸಹ ಮಾಡಲಾಗಿದೆ.

ಅದ್ದರಿಂದ ಈ ವಿಧೇಯಕ.

(೨೦೦೦ದ ವಿಧಾನ ಸಭೆಯ ವಿಧೇಯಕ ಸಂಖ್ಯೆ: ೪೧)

**೨೦೦೨ರ ಕರ್ನಾಟಕ ಅಧಿನಿಯಮ ಸಂಖ್ಯೆ: ೧**

*(೨೦೦೨ನೇ ಜನವರಿ ಎರಡನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದೆ)*

# ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ಅಧಿನಿಯಮ, ೨೦೦೦

*(೨೦೦೧ನೇ ಡಿಸೆಂಬರ್ ಇಪ್ಪತ್ತೆರಡನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)*

ವ್ಯವಸ್ಥಿತ ಅಪರಾಧಿಗಳ ಕೂಟ ಅಥವಾ ತಂಡಗಳು ನಡೆಸುವಂಥ ಅಪರಾಧಿಕ ಚಟುವಟಿಕೆಗಳನ್ನು ಪ್ರತಿಬಂಧಿಸುವುದಕ್ಕಾಗಿ ಮತ್ತು ಅವುಗಳನ್ನು ನಿಯಂತ್ರಿಸುವುದಕ್ಕಾಗಿ ಹಾಗೂ ನಿಭಾಯಿಸುವುದಕ್ಕಾಗಿ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕ ವಿಷಯಗಳಿಗಾಗಿ ವಿಶೇಷ ಉಪಬಂಧಗಳನ್ನು ರಚಿಸಲು ಒಂದು ಅಧಿನಿಯಮ.

ವ್ಯವಸ್ಥಿತ ಅಪರಾಧಿಗಳ ಕೂಟ ಅಥವಾ ತಂಡಗಳು ನಡೆಸುವಂಥ ಅಪರಾಧಿಕ ಚಟುವಟಿಕೆಗಳನ್ನು ಪ್ರತಿಬಂಧಿಸುವುದಕ್ಕಾಗಿ ಮತ್ತು ಅವುಗಳನ್ನು ನಿಯಂತ್ರಿಸುವುದಕ್ಕಾಗಿ ಹಾಗೂ ನಿಭಾಯಿಸುವುದಕ್ಕಾಗಿ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕ ವಿಷಯಗಳಿಗಾಗಿ ವಿಶೇಷ ಉಪಬಂಧಗಳನ್ನು ರಚಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ ಎಂದರೆ:-

೧. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (೧) ಈ ಅಧಿನಿಯಮವನ್ನು ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ಅಧಿನಿಯಮ, ೨೦೦೦ ಎಂದು ಕರೆಯತಕ್ಕದ್ದು.

(೨) ಇದು ಸಮಗ್ರ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(೩) ಇದು ಕೂಡಲೆ ಜಾರಿಗೆ ಬರತಕ್ಕದ್ದು.

**೨. ಪರಿಭಾಷೆಗಳು.**- (೧) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ)''ದುಷ್ಪ್ರೇರಿಸು'' ಎಂಬುದು, ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಜ್ಞಾತಿ ಪದಾವಳಿಗಳೊಂದಿಗೆ,-

(i) ಯಾವೊಬ್ಬ ವ್ಯಕ್ತಿಯು ಒಂದು ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ ಯಾವುದೇ ರೀತಿಯಲ್ಲಿ ನೆರವು ನೀಡುತ್ತಿದ್ದಾನೆಂಬ ಬಗ್ಗೆ ತಿಳುವಳಿಕೆ ಹೊಂದಿದ್ದು ಅಥವಾ ನಂಬಲು ಕಾರಣವಿದ್ದು ಅಂಥ ವ್ಯಕ್ತಿಯೊಡನೆ ಸಂಪರ್ಕ ಅಥವಾ ಒಡನಾಟ ಹೊಂದಿರುವುದು;

(ii) ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ ಸಹಾಯಕವಾಗುವ ಸಂಭವವಿರುವ ಯಾವುದೇ ಮಾಹಿತಿಯನ್ನು, ಯಾವುದೇ ಕಾನೂನುಬದ್ಧ ಅಧಿಕಾರವಿಲ್ಲದೆ ನೀಡುವುದು ಅಥವಾ ಪ್ರಕಟಿಸುವುದು ಮತ್ತು ವ್ಯವಸ್ಥಿತ ಅಪರಾಧಿಗಳ ಕೂಟದಿಂದ ಪಡೆದ ಯಾವುದೇ ದಾಖಲೆ ಅಥವಾ ವಿಷಯವನ್ನು ನೀಡುವುದು ಅಥವಾ ಪ್ರಕಟಿಸುವುದು ಅಥವಾ ಹಂಚುವುದು; ಮತ್ತು

(iii) ವ್ಯವಸ್ಥಿತ ಅಪರಾಧಿಗಳ ಕೂಟಕ್ಕೆ, ಆರ್ಥಿಕವಾಗಿಯಾಗಲಿ ಅಥವಾ ಇತರ ರೀತಿಯಲ್ಲಿಯಾಗಲಿ ಯಾವುದೇ ಸಹಾಯ ನೀಡುವುದು;

- ಇವುಗಳನ್ನು ಒಳಗೊಳ್ಳುತ್ತದೆ;

(ಬಿ) ''ಸಂಹಿತೆ'' ಎಂದರೆ, ದಂಡ ಪ್ರಕ್ರಿಯಾ ಸಂಹಿತೆ, ೧೯೭೩ (೧೯೭೪ರ ಕೇಂದ್ರ ಅಧಿನಿಯಮ ೨);

(ಸಿ) ''ಸಕ್ಷಮ ಪ್ರಾಧಿಕಾರಿ'' ಎಂದರೆ, ೧೩ನೇ ಪ್ರಕರಣದ ಅಡಿಯಲ್ಲಿ ನೇಮಿಸಲಾದ ಒಬ್ಬ ಒಂದು ಸಕ್ಷಮ ಪ್ರಾಧಿಕಾರಿ;

(ಡಿ) ''ಮುಂದುವರಿಯುತ್ತಿರುವ ಕಾನೂನು ಬಾಹಿರ ಚಟುವಟಿಕೆ'' ಎಂದರೆ, ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿ ಒಬ್ಬನೇ ಅಥವಾ ಜಂಟಿಯಾಗಿ ಕೈಗೊಂಡ ಅಥವಾ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಯಾವ ಕೂಟಕ್ಕೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಚಾರ್ಜ್‌ಶೀಟುಗಳನ್ನು ಸಕ್ಷಮ ನ್ಯಾಯಾಲಯದ ಮುಂದೆ ದಾಖಲು ಮಾಡಲಾಗಿದೆಯೋ ಮತ್ತು ಅಂಥ ಯಾವ ಅಪರಾಧವನ್ನು ನ್ಯಾಯಾಲಯವು ಸಂಜ್ಞೇಯವೆಂದು ಪರಿಗಣಿಸಿರುವುದೋ ಅಂಥ ಕೂಟದ ಪರವಾಗಿ

ಕೈಗೊಂಡ, ಮೂರು ವರ್ಷಗಳ ಅಥವಾ ಹೆಚ್ಚಿನ ಅವಧಿಯ ಕಾರಾವಾಸದಿಂದ ದಂಡನೀಯವಾದ ಸಂಜ್ಞೇಯ ಅಪರಾಧವಾಗಿರುವ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಿಂದ ನಿಷೇಧಿತವಾದ ಚಟುವಟಿಕೆ;

(ಇ) ''ವ್ಯವಸ್ಥಿತ ಅಪರಾಧ'' ಎಂದರೆ, ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿಯಾಗಲಿ ಅಥವಾ ಅಂಥ ಕೂಟದ ಪರವಾಗಿಯಾಗಲಿ ಒಬ್ಬನೇ ಅಥವಾ ಜಂಟಿಯಾಗಿ ತನಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಅಥವಾ ದಂಗೆಯನ್ನು ಉತ್ತೇಜಿಸುವುದಕ್ಕಾಗಿ ಆರ್ಥಿಕ ಪ್ರಯೋಜನವನ್ನು ಪಡೆಯುವ ಅಥವಾ ಅನುಚಿತ ಹಣಕಾಸಿನ ಅಥವಾ ಇತರ ಅನುಕೂಲಗಳನ್ನು ಪಡೆಯುವ ಉದ್ದೇಶದಿಂದ ಹಿಂಸೆಯ ಬಳಕೆಯ ಮೂಲಕ ಅಥವಾ ಹಿಂಸೆಯ ಬೆದರಿಕೆಯ ಮೂಲಕ ಅಥವಾ ಭಯೋತ್ಪಾದನೆ ಅಥವಾ ಬಲಾತ್ಕಾರ ಅಥವಾ ಇತರ ಕಾನೂನು ಬಾಹಿರ ವಿಧಾನಗಳ ಮೂಲಕ ಒಬ್ಬ ವ್ಯಕ್ತಿಯು ಕೈಗೊಳ್ಳುವ ಮುಂದುವರೆಯುತ್ತಿರುವ ಯಾವುದೇ ಕಾನೂನು ಬಾಹಿರ ಚಟುವಟಿಕೆ;

(ಎಫ್) ''ವ್ಯವಸ್ಥಿತ ಅಪರಾಧಿಗಳ ಕೂಟ'' ಎಂದರೆ, ಒಬ್ಬನೇ ಅಥವಾ ಸಾಮೂಹಿಕವಾಗಿ ಒಂದು ಕೂಟದಂತೆ ಅಥವಾ ತಂಡದಂತೆ ವರ್ತಿಸುವ ವ್ಯವಸ್ಥಿತ ಅಪರಾಧಿಗಳ ಚಟುವಟಿಕೆಗಳಲ್ಲಿ ತೊಡಗಿರುವ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳ ಒಂದು ಗುಂಪು;

(ಜಿ) ''ಪರಿಶೀಲನಾ ಸಮಿತಿ'' ಎಂದರೆ, ೧೬ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಒಂದು ಪರಿಶೀಲನಾ ಸಮಿತಿ.

(ಹೆಚ್) ''ವಿಶೇಷ ನ್ಯಾಯಾಲಯ'' ಎಂದರೆ, ೫ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ವಿಶೇಷ ನ್ಯಾಯಾಲಯ.

(೨) ಅಧಿನಿಯಮದಲ್ಲಿ ಉಪಯೋಗಿಸಿರುವ ಮತ್ತು ಪರಿಭಾಷಿಸದಿರುವ ಮತ್ತು ಸಂಹಿತೆಯಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

**೩. ವ್ಯವಸ್ಥಿತ ಅಪರಾಧಕ್ಕಾಗಿ ದಂಡನೆ.–** (೧) ಯಾವೊಬ್ಬನು, ವ್ಯವಸ್ಥಿತ ಅಪರಾಧವನ್ನು ಮಾಡಿದಾಗ,–

(i) ಅಂಥ ಕೃತ್ಯವು, ಯಾವೊಬ್ಬ ವ್ಯಕ್ತಿಯ ಮರಣದಲ್ಲಿ ಪರಿಣಮಿಸಿದರೆ, ಆಗ ಮರಣದಂಡನೆಯಿಂದ ಅಥವಾ ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಕೂಡ ಗುರಿಯಾಗತಕ್ಕದ್ದು.

(ii) ಇತರ ಯಾವುದೇ ಪ್ರಕರಣದಲ್ಲಿ, ಐದು ವರ್ಷಗಳ ಅವಧಿಗೆ ಕಡಿಮೆಯಲ್ಲದ ಆದರೆ ಆಜೀವಾವಧಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಕೂಡ ಗುರಿಯಾಗತಕ್ಕದ್ದು.

(೨) ಯಾವೊಬ್ಬನು ಒಂದು ವ್ಯವಸ್ಥಿತ ಅಪರಾಧವನ್ನು ಅಥವಾ ವ್ಯವಸ್ಥಿತ ಅಪರಾಧಕ್ಕೆ ಪೂರ್ವಸಿದ್ಧತೆ ಮಾಡಿಕೊಡುವ ಯಾವುದೇ ಕೃತ್ಯವನ್ನು ನಡೆಸುವ ಒಳಸಂಚು ಮಾಡಿದರೆ ಅಥವಾ ನಡೆಸಲು ಯತ್ನಿಸಿದರೆ ಅಥವಾ ಪ್ರತಿಪಾದಿಸಿದರೆ, ದುಷ್ಪ್ರೇರಿಸಿದರೆ ಅಥವಾ ಗೊತ್ತಿದ್ದೂ ಅನುಕೂಲ ಮಾಡಿಕೊಟ್ಟರೆ ಐದು ವರ್ಷಗಳ ಅವಧಿಗೆ ಕಡಿಮೆಯಾಗಿರತಕ್ಕದ್ದಲ್ಲದ, ಆದರೆ ಆಜೀವಾವಧಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಕೂಡಾ ಗುರಿಯಾಗತಕ್ಕದ್ದು.

(೩) ಯಾವೊಬ್ಬನು ವ್ಯವಸ್ಥಿತ ಅಪರಾಧಿಗಳ ಕೂಟದ ಯಾವೊಬ್ಬ ಸದಸ್ಯನಿಗೆ ಆಶ್ರಯ ನೀಡಿದರೆ ಅಥವಾ ಬಚ್ಚಿಟ್ಟರೆ ಅಥವಾ ಆಶ್ರಯ ನೀಡಲು ಅಥವಾ ಬಚ್ಚಿಡಲು ಪ್ರಯತ್ನ ಮಾಡಿದರೆ, ಐದು ವರ್ಷಗಳ ಅವಧಿಗೆ ಕಡಿಮೆಯಾಗಿರತಕ್ಕದ್ದಲ್ಲದ ಆದರೆ ಆಜೀವಾವಧಿಯವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಕೂಡಾ ಗುರಿಯಾಗತಕ್ಕದ್ದು.

(೪) ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನಾಗಿರುವ ಯಾವೊಬ್ಬ ವ್ಯಕ್ತಿಯು, ಐದು ವರ್ಷಗಳ ಅವಧಿಗೆ ಕಡಿಮೆಯಾಗಿರತಕ್ಕದ್ದಲ್ಲದ ಆದರೆ ಆಜೀವಾವಧಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಕೂಡ ಗುರಿಯಾಗತಕ್ಕದ್ದು.

(೫) ಯಾವೊಬ್ಬನು, ವ್ಯವಸ್ಥಿತ ಅಪರಾಧವನ್ನು ಮಾಡಿದ್ದರಿಂದ ಪ್ರಾಪ್ತವಾದ ಅಥವಾ ಪಡೆದ ಅಥವಾ ವ್ಯವಸ್ಥಿತ ಅಪರಾಧಿಗಳ ಕೂಟದ ನಿಧಿಯಿಂದ ಆರ್ಜಿಸಿದ ಯಾವುದೇ ಸ್ವತ್ತನ್ನು ಹೊಂದಿದ್ದರೆ ಮೂರು ವರ್ಷಕ್ಕೆ ಕಡಿಮೆಯಾಗಿರತಕ್ಕದ್ದಲ್ಲದ

ಅವಧಿಯ ಆದರೆ ಆಜೀವಾವಧಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಎರಡು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಕೂಡಾ ಗುರಿಯಾಗತಕ್ಕದ್ದು.

**೪. ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನ ಪರವಾಗಿ ಲೆಕ್ಕ ಇಟ್ಟಿರದ ಸಂಪತ್ತನ್ನು ಹೊಂದಿದ್ದಕ್ಕಾಗಿ ದಂಡನೆ.–** ಯಾವೊಬ್ಬ ವ್ಯಕ್ತಿಯು, ಒಂದು ವ್ಯವಸ್ಥಿತ ಅಪರಾಧಿಗಳ ಕೂಟದ ಸದಸ್ಯನ ಪರವಾಗಿ ಚರ ಅಥವಾ ಸ್ಥಿರ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದರೆ ಅಥವಾ ಯಾವುದೇ ಸಮಯದಲ್ಲಿ ಹೊಂದಿದ್ದು ಅದಕ್ಕೆ ತೃಪ್ತಿಕರವಾದ ಲೆಕ್ಕವನ್ನು ನೀಡದಿದ್ದರೆ ಮೂರು ವರ್ಷಗಳ ಅವಧಿಗೆ ಕಡಿಮೆಯಾಗಿರತಕ್ಕದ್ದಲ್ಲದ ಆದರೆ ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳಿಗೆ ಕಡಿಮೆಯಾಗಿರತಕ್ಕದ್ದಲ್ಲದ ಜುಲ್ಮಾನೆಗೆ ಕೂಡಾ ಗುರಿಯಾಗತಕ್ಕದ್ದು ಮತ್ತು ಅಂಥ ಸ್ವತ್ತು ಸಹ ೨೧ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಜಪ್ತಿ ಮತ್ತು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು.

**೫. ವಿಶೇಷ ನ್ಯಾಯಾಲಯಗಳು.–** (೧) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಪ್ರದೇಶ ಅಥವಾ ಪ್ರದೇಶಗಳಿಗೆ, ಅಥವಾ ಅಂಥ ಪ್ರಕರಣ ಅಥವಾ ಪ್ರಕರಣಗಳ ವರ್ಗ ಅಥವಾ ಗುಂಪಿಗೆ, ಒಂದು ಅಥವಾ ಹೆಚ್ಚು ವಿಶೇಷ ನ್ಯಾಯಾಲಯಗಳನ್ನು ರಚಿಸಬಹುದು.

(೨) ಯಾವುದೇ ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದಲ್ಲಿ, ಅದನ್ನು ರಾಜ್ಯ ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು, ಹಾಗೂ ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(೩) ರಾಜ್ಯ ಸರ್ಕಾರವು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಹಮತಿಯೊಡನೆ ನೇಮಕ ಮಾಡಿದ ನ್ಯಾಯಾಧೀಶರು ವಿಶೇಷ ನ್ಯಾಯಾಲಯದ ಅಧ್ಯಕ್ಷತೆ ವಹಿಸತಕ್ಕದ್ದು. ರಾಜ್ಯ ಸರ್ಕಾರವು, ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಹಮತಿಯೊಡನೆ ವಿಶೇಷ ನ್ಯಾಯಾಲಯದಲ್ಲಿ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ಹೆಚ್ಚುವರಿ ನ್ಯಾಯಾಧೀಶರುಗಳನ್ನು ಸಹ ನೇಮಕ ಮಾಡಬಹುದು.

(೪) ಒಬ್ಬ ವ್ಯಕ್ತಿಯು, ಒಂದು ವಿಶೇಷ ನ್ಯಾಯಾಲಯದ ನ್ಯಾಯಾಧೀಶನಾಗಿ ಅಥವಾ ಹೆಚ್ಚುವರಿ ನ್ಯಾಯಾಧೀಶನಾಗಿ ನೇಮಕ ಹೊಂದಲು, ಅಂಥ ನೇಮಕಾತಿಯ ನಿಕಟಪೂರ್ವದಲ್ಲಿ ಸೆಷನ್ ನ್ಯಾಯಾಧೀಶ ಅಥವಾ ಅಪರ ಸೆಷನ್ ನ್ಯಾಯಾಧೀಶ ಆಗಿದ್ದ ಹೊರತು, ಅರ್ಹನಾಗತಕ್ಕದ್ದಲ್ಲ.

(೫) ಒಂದು ವಿಶೇಷ ನ್ಯಾಯಾಲಯದಲ್ಲಿ ಯಾವೊಬ್ಬ ಹೆಚ್ಚುವರಿ ನ್ಯಾಯಾಧೀಶನನ್ನು ಅಥವಾ ಹೆಚ್ಚುವರಿ ನ್ಯಾಯಾಧೀಶರನ್ನು ನೇಮಕ ಮಾಡಿದ್ದಲ್ಲಿ, ವಿಶೇಷ ನ್ಯಾಯಾಲಯದ ನ್ಯಾಯಾಧೀಶನು, ಕಾಲಕಾಲಕ್ಕೆ ಲಿಖಿತದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ತನ್ನ ಮತ್ತು ಹೆಚ್ಚುವರಿ ನ್ಯಾಯಾಧೀಶ ಅಥವಾ ಹೆಚ್ಚುವರಿ ನ್ಯಾಯಾಧೀಶರ ನಡುವೆ ವಿಶೇಷ ನ್ಯಾಯಾಲಯದ ವ್ಯವಹಾರಗಳ ಹಂಚಿಕೆಗಾಗಿ ಮತ್ತು ತನ್ನ ಗೈರು ಹಾಜರಿಯಲ್ಲಿ ಅಥವಾ ಯಾವೊಬ್ಬ ಹೆಚ್ಚುವರಿ ನ್ಯಾಯಾಧೀಶರ ಗೈರು ಹಾಜರಿಯಲ್ಲಿ ತುರ್ತು ವ್ಯವಹಾರದ ಇತ್ಯರ್ಥಕ್ಕಾಗಿ ಕೂಡ ಉಪಬಂಧ ಕಲ್ಪಿಸಬಹುದು.

**೬. ವಿಶೇಷ ನ್ಯಾಯಾಲಯದ ಅಧಿಕಾರ ವ್ಯಾಪ್ತಿ. –** ಸಂಹಿತೆಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಪ್ರತಿಯೊಂದು ಅಪರಾಧದ ಬಗ್ಗೆ, ಅದು ಯಾವ ವಿಶೇಷ ನ್ಯಾಯಾಲಯದ ಸ್ಥಳೀಯ ಅಧಿಕಾರ ವ್ಯಾಪ್ತಿಯಲ್ಲಿ ಘಟಿಸಿದೆಯೋ ಆ ವಿಶೇಷ ನ್ಯಾಯಾಲಯವು ಅಥವಾ ಸಂದರ್ಭಾನುಸಾರ, ೫ನೇ ಪ್ರಕರಣದ (೧)ನೇ ಉಪ ಪ್ರಕರಣದ ಅಡಿಯಲ್ಲಿ ಅಂಥ ಅಪರಾಧಗಳ ಅಧಿವಿಚಾರಣೆಗಾಗಿ ರಚಿಸಿದ ವಿಶೇಷ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದು.

**೭. ಇತರ ಅಪರಾಧಗಳ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಅಧಿಕಾರ.–** (೧) ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡುವಾಗ ಒಂದು ವಿಶೇಷ ನ್ಯಾಯಾಲಯವು ಅದೇ ಅಧಿವಿಚಾರಣೆಯ ಸಂದರ್ಭದಲ್ಲಿ ಸಂಹಿತೆಯ ಅಡಿಯಲ್ಲಿ ಆಪಾದಿತನ ವಿರುದ್ಧ ಆರೋಪಿಸಲಾದ ಇತರ ಯಾವುದೇ ಅಪರಾಧದ ಸಂಬಂಧದಲ್ಲಿ ಆ ಅಪರಾಧವು ಅಂಥ ಇತರ ಅಪರಾಧಕ್ಕೆ ಸಂಬಂಧಿಸಿದ್ದರೆ ಅದರ ಅಧಿವಿಚಾರಣೆಯನ್ನು ಸಹ ಮಾಡಬಹುದು.

(೨) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧದ ಯಾವುದೇ ಅಧಿವಿಚಾರಣೆಯ ಸಮಯದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಇತರ ಅಪರಾಧವನ್ನು ಆಪಾದಿತ ವ್ಯಕ್ತಿಗಳು ಮಾಡಿದ್ದಾರೆಂದು ಕಂಡುಬಂದರೆ, ವಿಶೇಷ ನ್ಯಾಯಾಲಯವು, ಅಂಥ ವ್ಯಕ್ತಿಗಳನ್ನು ಅಂಥ ಇತರ ಅಪರಾಧದ ಸಂಬಂಧದಲ್ಲಿ ದೋಷಸಿದ್ಧಿ ಎಂದು ಮಾಡಬಹುದು ಮತ್ತು ಆ ಬಗ್ಗೆ ಶಿಕ್ಷಿಸುವುದಕ್ಕಾಗಿ ಈ ಅಧಿನಿಯಮದಿಂದ ಅಥವಾ ಸಂದರ್ಭಾನುಸಾರ, ಅಂಥ ಇತರ ಕಾನೂನಿನಿಂದ ಪ್ರಾಧಿಕರಿಸಲಾದ ಯಾವುದೇ ಶಿಕ್ಷೆಯನ್ನು ನೀಡಬಹುದು.

**೮. ಸರ್ಕಾರಿ ಅಭಿಯೋಜಕ.–** (೧) ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕಾಗಿ, ರಾಜ್ಯ ಸರ್ಕಾರವು, ಒಬ್ಬ ವ್ಯಕ್ತಿಯನ್ನು ಸರ್ಕಾರಿ ಅಭಿಯೋಜಕನನ್ನಾಗಿ (ಪಬ್ಲಿಕ್ ಪ್ರಾಸಿಕ್ಯೂಟರ್) ನೇಮಕ ಮಾಡತಕ್ಕದ್ದು ಮತ್ತು ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನು ಹೆಚ್ಚುವರಿ ಸರ್ಕಾರಿ ಅಭಿಯೋಜಕರನ್ನಾಗಿ ಅಥವಾ [೧][ಹೆಚ್ಚುವರಿ ಸರ್ಕಾರಿ ಅಭಿಯೋಜಕನನ್ನಾಗಿ][೧] ನೇಮಕ ಮಾಡಬಹುದು:

ಪರಂತು, ರಾಜ್ಯ ಸರ್ಕಾರವು ಯಾವುದೇ ಮೊಕದ್ದಮೆ ಅಥವಾ ಮೊಕದ್ದಮೆಗಳ ಗುಂಪಿಗೆ ಒಬ್ಬ ವಿಶೇಷ ಸರ್ಕಾರಿ ಅಭಿಯೋಜಕನನ್ನು ಸಹ ನೇಮಕ ಮಾಡಬಹುದು.

೧. ತಿದ್ದೋಲೆ ಸಂಖ್ಯೆ: ಸಂವ್ಯಶಾಇ ೫೩ ಶಾಸನ ೨೦೦೦, ದಿನಾಂಕ: ೧೦.೧.೨೦೦೩

(೨) ಒಬ್ಬ ವ್ಯಕ್ತಿಯು ಹತ್ತು ವರ್ಷಗಳಿಗೆ ಕಡಿಮೆಯಲ್ಲದ ಅವಧಿಗೆ ನ್ಯಾಯ ವಾಧಿಯಾಗಿ ವೃತ್ತಿಯನ್ನು ನಡೆಸಿದ ಹೊರತು, ಒಬ್ಬ ಸರ್ಕಾರಿ ಅಭಿಯೋಜಕನಾಗಿ, ಹೆಚ್ಚುವರಿ ಸರ್ಕಾರಿ ಅಭಿಯೋಜಕನಾಗಿ ಅಥವಾ ಒಬ್ಬ ವಿಶೇಷ ಸರ್ಕಾರಿ ಅಭಿಯೋಜಕನಾಗಿ ನೇಮಕನಾಗಲು ಅರ್ಹನಾಗತಕ್ಕದ್ದಲ್ಲ.

(೩) ಈ ಪ್ರಕರಣದ ಅಡಿಯಲ್ಲಿ, ಸರ್ಕಾರಿ ಅಭಿಯೋಜಕನಾಗಿ ಅಥವಾ ಹೆಚ್ಚುವರಿ ಸರ್ಕಾರಿ ಅಭಿಯೋಜಕನಾಗಿ ಅಥವಾ ವಿಶೇಷ ಸರ್ಕಾರಿ ಅಭಿಯೋಜಕನಾಗಿ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು, ಸಂಹಿತೆಯ ೨ನೇ ಪ್ರಕರಣದ (ಯು)ಖಂಡದ ಅರ್ಥವ್ಯಾಪ್ತಿಯಲ್ಲಿ ಸರ್ಕಾರಿ ಅಭಿಯೋಜಕ ಎಂದು ಭಾವಿಸತಕ್ಕದ್ದು ಮತ್ತು ಸಂಹಿತೆಯ ಉಪಬಂಧಗಳು ತದನುಸಾರವಾಗಿ ಪರಿಣಾಮಕಾರಿಯಾಗಿರತಕ್ಕದ್ದು.

**೯. ವಿಶೇಷ ನ್ಯಾಯಾಲಯದ ಕಾರ್ಯವಿಧಾನ ಮತ್ತು ಅಧಿಕಾರಗಳು.–** (೧) ವಿಶೇಷ ನ್ಯಾಯಾಲಯವು, ಯಾವುದೇ ಅಪರಾಧಕ್ಕೆ ಸಂಬಂಧಿಸಿದ ವಾಸ್ತವಾಂಶಗಳ ದೂರನ್ನು ಸ್ವೀಕರಿಸಿದ ಮೇಲೆ ಅಥವಾ ಅಂಥ ವಾಸ್ತವಾಂಶಗಳ ಬಗ್ಗೆ ಪೋಲೀಸ್ ವರದಿಯನ್ನು ಸ್ವೀಕರಿಸಿದ ಮೇಲೆ ಆಪಾದಿತನನ್ನು, ಅಧಿವಿಚಾರಣೆಗಾಗಿ ಅದಕ್ಕೆ ಒಪ್ಪಿಸದಿದ್ದರೂ, ಅಂಥ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳಬಹುದು.

(೨) ವಿಶೇಷ ನ್ಯಾಯಾಲಯವು ಅಧಿವಿಚಾರಣೆ ನಡೆಸುವ ಒಂದು ಅಪರಾಧವು, ಮೂರು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡನೀಯವಾಗಿದ್ದರೆ, ವಿಶೇಷ ನ್ಯಾಯಾಲಯವು, ಸಂಹಿತೆಯ ೨೬೦ನೇ ಪ್ರಕರಣದ (೧)ನೇ ಉಪ ಪ್ರಕರಣ ಅಥವಾ ೨೬೨ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಂಹಿತೆಯಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ಅಪರಾಧದ ಬಗ್ಗೆ, ಸಂಕ್ಷಿಪ್ತ ರೀತಿಯಲ್ಲಿ ಅಧಿವಿಚಾರಣೆ ಮಾಡಬಹುದು ಮತ್ತು ಸಂಹಿತೆಯ ೨೬೩ರಿಂದ ೨೬೫ನೇ ಪ್ರಕರಣಗಳ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ, ಅಂಥ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದ ಅಡಿಯಲ್ಲಿ ಸಂಕ್ಷಿಪ್ತ ಅಧಿವಿಚಾರಣೆಯ ಅವಧಿಯಲ್ಲಿ ಅಂಥ ಮೊಕದ್ದಮೆಯ ಸ್ವರೂಪವು ಸಂಕ್ಷಿಪ್ತ ಅಧಿವಿಚಾರಣೆ ನಡೆಸಲು ಅಪೇಕ್ಷಣೀಯವಾಗಿಲ್ಲವೆಂದು ವಿಶೇಷ ನ್ಯಾಯಾಲಯಕ್ಕೆ ಕಂಡುಬಂದರೆ, ವಿಶೇಷ ನ್ಯಾಯಾಲಯವು, ಪರೀಕ್ಷಿಸಲ್ಪಟ್ಟ ಯಾರೇ ಸಾಕ್ಷಿದಾರರನ್ನು ಪುನ: ಕರೆಸತಕ್ಕದ್ದು ಮತ್ತು ಅಂಥ ಅಪರಾಧದ ಅಧಿವಿಚಾರಣೆಗಾಗಿ ಸಂಹಿತೆಯ ಉಪಬಂಧಗಳ ಮೂಲಕ ಉಪಬಂಧಿಸಿದ ರೀತಿಯಲ್ಲಿ ಮೊಕದ್ದಮೆಯ ಮರು ಸುನಾವಣೆ ನಡೆಸಲು ಮುಂದುವರೆಯತಕ್ಕದ್ದು ಮತ್ತು ಸದರಿ ಉಪಬಂಧಗಳು ಮ್ಯಾಜಿಸ್ಟ್ರೇಟನಿಗೆ ಮತ್ತು ಅವನ ಸಂಬಂಧದಲ್ಲಿ ಅನ್ವಯವಾಗುವ ರೀತಿಯಲ್ಲಿ ವಿಶೇಷ ನ್ಯಾಯಾಲಯಕ್ಕೆ ಮತ್ತು ಅದರ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು:

ಮತ್ತು ಪರಂತು, ಈ ಪ್ರಕರಣದ ಅಡಿಯಲ್ಲಿ ಯಾವುದೇ ಸಂಕ್ಷಿಪ್ತ ಅಧಿವಿಚಾರಣೆಯಲ್ಲಿ ದೋಷಸಿದ್ಧಿಯಾದ ಸಂದರ್ಭದಲ್ಲಿ, [೧][ಎರಡು ವರ್ಷಗಳಿಗೆ ಮೀರದ][೧] ಅವಧಿಗೆ ಕಾರಾವಾಸದ ಶಿಕ್ಷೆಯ ಆದೇಶವನ್ನು ಹೊರಡಿಸುವುದು ವಿಶೇಷ ನ್ಯಾಯಾಲಯಕ್ಕೆ ಕಾನೂನುಬದ್ಧವಾಗಿರತಕ್ಕದ್ದು.

೧. ತಿದ್ದೋಲೆ ಸಂಖ್ಯೆ: ಸಂವ್ಯಶಾಇ ೫೩ ಶಾಸನ ೨೦೦೦, ದಿನಾಂಕ: ೭.೧.೨೦೦೨

(೩) ವಿಶೇಷ ನ್ಯಾಯಾಲಯವು, ಒಂದು ಅಪರಾಧಕ್ಕೆ ನೇರವಾಗಿ ಸಂಬಂಧಪಟ್ಟಿರುವನೆಂದು ಅಥವಾ ಅದಕ್ಕೆ ಭಾಗಿಯಾದವನೆಂದು ಭಾವಿಸಲಾದ ಯಾವೊಬ್ಬ ವ್ಯಕ್ತಿಯ ಸಾಕ್ಷ್ಯವನ್ನು ಪಡೆಯುವ ದೃಷ್ಟಿಯಿಂದ, ಅಂಥ ವ್ಯಕ್ತಿಯನ್ನು, ಅಪರಾಧಕ್ಕೆ ಸಂಬಂಧಿಸಿದಂತೆ ಮತ್ತು ಅದನ್ನು ಮಾಡುವಲ್ಲಿ ಮೂಲಕರ್ತನಾಗಿಯಾಗಲೀ ಅಥವಾ ದುಷ್ಪ್ರೇರಕನಾಗಿಯಾಗಲೀ ಸಂಬಂಧಪಟ್ಟ ಇತರ ಪ್ರತಿಯೊಬ್ಬ ವ್ಯಕ್ತಿಯ ಬಗ್ಗೆ ತನಗೆ ತಿಳಿದಿರುವ ಸಮಗ್ರ ಸನ್ನಿವೇಶಗಳ ಬಗ್ಗೆ ಪೂರ್ಣವಾಗಿ ಹಾಗೂ ಸತ್ಯವಾಗಿ ಬಹಿರಂಗ ಪಡಿಸುವ ಷರತ್ತಿನ ಮೇಲೆ ಅವನಿಗೆ ಕ್ಷಮೆ ನೀಡಬಹುದು ಮತ್ತು ಹಾಗೆ ನೀಡಿದ ಯಾವುದೇ ಕ್ಷಮೆಯನ್ನು, ಸಂಹಿತೆಯ ೩೦೮ನೇ ಪ್ರಕರಣದ ಉದ್ದೇಶಕ್ಕಾಗಿ, ಅದರ ೩೦೬ನೇ ಪ್ರಕರಣದ ಅಡಿಯಲ್ಲಿ ನೀಡಲಾಗಿದೆಯೆಂದು ಭಾವಿಸತಕ್ಕದ್ದು.

(೪) ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಒಂದು ವಿಶೇಷ ನ್ಯಾಯಾಲಯವು, ಯಾವುದೇ ಅಪರಾಧದ ಅಧಿವಿಚಾರಣೆಯ ಉದ್ದೇಶಕ್ಕಾಗಿ, ಸೆಷನ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಪರಾಧದ ಅಧಿವಿಚಾರಣೆಯನ್ನು ಸೆಷನ್ ನ್ಯಾಯಾಲಯದ ಮುಂದೆ ಸಾಧ್ಯವಾದಷ್ಟುಮಟ್ಟಿಗೆ ಅಧಿವಿಚಾರಣೆಗಾಗಿ ಸಂಹಿತೆಯಲ್ಲಿ ನಿರ್ದಿಷ್ಟಪಡಿಸಿದ ಕಾರ್ಯವಿಧಾನಕ್ಕನುಸಾರವಾಗಿ ಅದು ಸೆಷನ್ ನ್ಯಾಯಾಲಯವಾಗಿದ್ದರೆ ಹೇಗೋ ಹಾಗೆ ನಡೆಸತಕ್ಕದ್ದು.

೧೦. **ವಿಶೇಷ ನ್ಯಾಯಾಲಯಗಳ ಅಧಿವಿಚಾರಣೆಯು ಅಗ್ರತೆಯನ್ನು ಹೊಂದಿರತಕ್ಕದ್ದು.–** ವಿಶೇಷ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ ನಡೆಸುವ ಯಾವುದೇ ಅಪರಾಧದ ಅಧಿವಿಚಾರಣೆಯು, ಇತರ ಯಾವುದೇ ನ್ಯಾಯಾಲಯದಲ್ಲಿ (ವಿಶೇಷ ನ್ಯಾಯಾಲಯವಲ್ಲದಿದ್ದಾಗ) ಆಪಾದಿತನ ವಿರುದ್ಧ ಯಾವುದೇ ಇತರ ಮೊಕದ್ದಮೆಯ ಅಧಿವಿಚಾರಣೆಯ ಮೇಲೆ ಅಗ್ರತೆಯನ್ನು ಹೊಂದಿರತಕ್ಕದ್ದು ಮತ್ತು ಅಂಥ ಇತರ ಮೊಕದ್ದಮೆಗಳಿಗಿಂತ ಅಧಿವಿಚಾರಣೆಯಲ್ಲಿ ಅಗ್ರತೆಯಾಗಿ ಮುಕ್ತಾಯವಾಗತಕ್ಕದ್ದು ಮತ್ತು ತದನುಸಾರವಾಗಿ ಅಂಥ ಇತರ ಮೊಕದ್ದಮೆಯ ಅಧಿವಿಚಾರಣೆಯು ನಿಲಂಬನಗೊಳ್ಳತಕ್ಕದ್ದು.

೧೧. **ಮೊಕದ್ದಮೆಗಳನ್ನು ನಿಯತ ನ್ಯಾಯಾಲಯಗಳಿಗೆ ವರ್ಗಾಯಿಸಲು ಅಧಿಕಾರ.–** ಅಪರಾಧದ ಸಂಜ್ಞಾನವನ್ನು ತೆಗೆದುಕೊಂಡ ನಂತರ, ವಿಶೇಷ ನ್ಯಾಯಾಲಯವು, ಆ ಅಪರಾಧದ ಬಗ್ಗೆ ಅದು ಅಧಿವಿಚಾರಣೆ ನಡೆಸುವಂತಿಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಅಂಥ ಅಪರಾಧದ ಅಧಿವಿಚಾರಣೆಯ ಅಧಿಕಾರ ವ್ಯಾಪ್ತಿ ಹೊಂದಿಲ್ಲವಾದರೂ ಸಂಹಿತೆಯ ಅಡಿಯಲ್ಲಿ ಅಧಿಕಾರ ವ್ಯಾಪ್ತಿ ಇರುವ ಇತರ ಯಾವುದೇ ನ್ಯಾಯಾಲಯಕ್ಕೆ ಅಂಥ ಅಪರಾಧದ ಅಧಿವಿಚಾರಣೆ ನಡೆಸಲು ಮೊಕದ್ದಮೆಯನ್ನು ವರ್ಗಾವಣೆ ಮಾಡತಕ್ಕದ್ದು ಮತ್ತು ಯಾವ ನ್ಯಾಯಾಲಯಕ್ಕೆ ಮೊಕದ್ದಮೆಯನ್ನು ವರ್ಗಾಯಿಸಲಾಗಿದೆಯೋ ಅದು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಂಡಿದ್ದರೆ ಹೇಗೋ ಹಾಗೆ, ಆ ನ್ಯಾಯಾಲಯವು ಈ ಅಪರಾಧದ ಅಧಿವಿಚಾರಣೆಯನ್ನು ಮುಂದುವರೆಸಬಹುದು.

೧೨. **ಅಪೀಲು.–** (೧) ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ ಸಹ, ವಿಶೇಷ ನ್ಯಾಯಾಲಯದ ವಾದ ಕಾಲೀನ ಆದೇಶವಾಗಿರದ ಯಾವುದೇ ತೀರ್ಪು, ದಂಡನೆ ಅಥವಾ ಆದೇಶದ ಮೇಲೆ ಉಚ್ಛ ನ್ಯಾಯಾಲಯಕ್ಕೆ ಅಪೀಲು ಹೂಡಲು ಅವಕಾಶವಿರತಕ್ಕದ್ದು.

(೨) ಈ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ಅಪೀಲನ್ನು, ತೀರ್ಪು, ದಂಡನೆ ಅಥವಾ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

೧೩. **ಸಕ್ಷಮ ಪ್ರಾಧಿಕಾರಿಯ ನೇಮಕ.–** ರಾಜ್ಯ ಸರ್ಕಾರವು, ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ, ಗೃಹ ಇಲಾಖೆಯ ತನ್ನ ಯಾವೊಬ್ಬ ಅಧಿಕಾರಿಯನ್ನು ೧೪ನೇ ಪ್ರಕರಣದ ಉದ್ದೇಶಗಳಿಗಾಗಿ ಸಕ್ಷಮ ಪ್ರಾಧಿಕಾರಿಯಾಗಿ ನೇಮಕ ಮಾಡಬಹುದು.

೧೪. **ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕ ತಡೆದು ಪ್ರತ್ಯೇಕಿಸುವಿಕೆಯನ್ನು ಅಧಿಕೃತಗೊಳಿಸುವುದು.–** (೧) ಈ ಅಧಿನಿಯಮದ ಅಡಿಯಲ್ಲಿ ಒಂದು ವ್ಯವಸ್ಥಿತ ಅಪರಾಧದ ತನಿಖೆಯ ಮೇಲ್ವಿಚಾರಣೆ ನಡೆಸುವ, ಪೋಲೀಸ್ ಸೂಪರಿಂಟೆಂಡೆಂಟ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಪೋಲೀಸ್ ಅಧಿಕಾರಿಯು, ಒಂದು ವ್ಯವಸ್ಥಿತ ಅಪರಾಧವನ್ನು ಒಳಗೊಂಡಿರುವ ಯಾವುದೇ ಅಪರಾಧದ ಸಾಕ್ಷ್ಯವನ್ನು ತಡೆದು ಪ್ರತ್ಯೇಕಿಸುವ ಮೂಲಕ ಒದಗಿಸಬಹುದು ಅಥವಾ ಒದಗಿಸಿದೆ ಎಂದಾಗ, ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತನಿಖಾಧಿಕಾರಿಯು ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸಲು ಅಥವಾ ಅನುಮೋದನೆ ನೀಡಲು ಒಂದು ಆದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಗೆ ಲಿಖಿತದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(೨) ಪ್ರತಿಯೊಂದು ಅರ್ಜಿಯು ಈ ಮುಂದಿನ ಮಾಹಿತಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಅರ್ಜಿಯನ್ನು ಸಲ್ಲಿಸುವ, ತನಿಖೆ ಅಥವಾ ಜಾರಿಗೊಳಿಸುವ ಅಧಿಕಾರಿಯ ಗುರುತು ಮತ್ತು ಅರ್ಜಿಯನ್ನು ಅಧಿಕೃತಗೊಳಿಸುವ ಇಲಾಖಾ ಮುಖ್ಯಸ್ಥ;

(ಬಿ) ಒಂದು ಆದೇಶವನ್ನು ನೀಡಬೇಕೆನ್ನುವ ತನ್ನ ನಂಬಿಕೆಯನ್ನು ಸಮರ್ಥಿಸಲು ಅರ್ಜಿದಾರನು ಅವಲಂಬಿಸಿರುವ ವಾಸ್ತವಾಂಶಗಳ ಮತ್ತು ಸಂದರ್ಭಗಳ ಒಂದು ವಿವರಣಾ ಪತ್ರ ಮತ್ತು ಅದರಲ್ಲಿ ಈ ಮುಂದಿನವುಗಳು ಒಳಗೊಂಡಿರಬೇಕು,–

(i) ವ್ಯವಸ್ಥಿತ ಅಪರಾಧಿಯು ಮಾಡಿರುವ, ಮಾಡುತ್ತಿರುವ ಅಥವಾ ಮಾಡಲಿರುವ ಅಪರಾಧದ ವಿವರಗಳು;

(ii) ಯಾವ ಸೌಲಭ್ಯಗಳಿಂದ ಅಥವಾ ಯಾವ ಸ್ಥಳದಿಂದ ಸಂಪರ್ಕವನ್ನು ತಡೆದು ಪ್ರತ್ಯೇಕಿಸಬೇಕಾಗಿದೆಯೋ ಅವುಗಳ ಸ್ವರೂಪ ಮತ್ತು ಸ್ಥಳದ ನಿರ್ದಿಷ್ಟ ವಿವರಣೆ;

(iii) ತಡೆದು ಪ್ರತ್ಯೇಕಿಸಬೇಕಾಗಿರುವ ಸಂಪರ್ಕಗಳ ಮಾದರಿಯ ನಿರ್ದಿಷ್ಟ ವಿವರಣೆ, ಮತ್ತು

(iv) ವ್ಯವಸ್ಥಿತ ಅಪರಾಧಕ್ಕೆ ಸಂಬಂಧಿಸಿದಂತೆ ಅಪರಾಧ ಮಾಡುತ್ತಿರುವ ಯಾವ ವ್ಯಕ್ತಿಯ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸಬೇಕಾಗಿದೆಯೋ ಆ ವ್ಯಕ್ತಿಯ ಗುರುತು ತಿಳಿದಿದ್ದರೆ, ಆ ಗುರುತು;

(ಸಿ) ವಿಚಾರಣೆಯ ಅಥವಾ ಗುಪ್ತ ವಾರ್ತೆ ಸಂಗ್ರಹಣೆಯ ಇತರ ವಿಧಾನಗಳನ್ನು ಪ್ರಯತ್ನಿಸಲಾಗಿತ್ತೇ ಮತ್ತು ಅವು ವಿಫಲವಾಗಿದ್ದವೇ ಅಥವಾ ಇಲ್ಲವೇ ಅಥವಾ ಪ್ರಯತ್ನಿಸಿದಲ್ಲಿ ಬಹು ಮಟ್ಟಿಗೆ ಯಶಸ್ವಿಯಾಗದಿರುವ ಸಾಧ್ಯತೆಗಳು ಇರುವಂತೆ ಅಥವಾ ತೀರಾ ಅಪಾಯಕಾರಿಯಾಗಿರುವಂತೆ ಅಥವಾ ತಡೆದು ಪ್ರತ್ಯೇಕಿಸುವ ಕಾರ್ಯಾಚರಣೆಗೆ ಸಂಬಂಧಿಸಿದವರ ಗುರುತನ್ನು ಬಹಿರಂಗಪಡಿಸುವ ಸಂಭವವಿರುವಂತೆ ಏಕೆ ಕಂಡುಬರುತ್ತದೆ ಎಂಬ ಬಗ್ಗೆ ವಿವರಣಾ ಪತ್ರ;

(ಡಿ) ವಿಚಾರಣೆಯ ಸ್ವರೂಪವು, ವಿವರಿಸಲಾದ ಸಂಪರ್ಕದ ಮಾದರಿಯನ್ನು ಮೊದಲು ಪಡೆದಾಗ, ತಡೆದು ಪ್ರತ್ಯೇಕಿಸುವ ಬಗ್ಗೆ ಅಧಿಕೃತಗೊಳಿಸುವುದು ತಾನಾಗಿಯೇ ಮುಕ್ತಾಯವಾಗತಕ್ಕದ್ದಲ್ಲ ಎನ್ನುವಂಥದ್ದಾಗಿದ್ದರೆ ಎಷ್ಟು ಕಾಲಾವಧಿಗೆ ತಡೆದು ಪ್ರತ್ಯೇಕಿಸುವ ಕಾರ್ಯವನ್ನು ನಿರ್ವಹಿಸುವ ಅಗತ್ಯವಿದೆಯೋ ಆ ಅವಧಿಯ ಬಗ್ಗೆ ವಿವರಣಾ ಪತ್ರ, ಅದೇ ರೀತಿಯ ಇನ್ನೂ ಹೆಚ್ಚಿನ ಸಂಪರ್ಕಗಳು ತದನಂತರ ಸಂಭವಿಸುತ್ತವೆ ಎಂಬುದನ್ನು ನಂಬಲು ಸಂಭವನೀಯ ಕಾರಣವನ್ನು ತೋರಿಸುವ ವಾಸ್ತವಾಂಶಗಳ ಒಂದು ನಿರ್ದಿಷ್ಟ ವಿವರಣೆ;

(ಇ) ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲಾದ ಹಿಂದಿನ ಎಲ್ಲಾ ಅರ್ಜಿಗಳಿಗೆ ಸಂಬಂಧಿಸಿದ ಎಲ್ಲಾ ವಾಸ್ತವಾಂಶಗಳ (ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಗೆ ತಿಳಿದಿರುವ) ಅಥವಾ ಆ ವ್ಯಕ್ತಿಗಳ ಪೈಕಿ ಯಾರನ್ನಾದರೂ ಒಳಗೊಂಡಿರುವ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದಕ್ಕೆ ಸಂಬಂಧಿಸಿದಂತೆ ಅಧಿಕೃತಗೊಳಿಸುವುದಕ್ಕಾಗಿ ಅಥವಾ ತಡೆದು ಪ್ರತ್ಯೇಕಿಸುವುದಕ್ಕೆ ಅನುಮೋದನೆ ಅಥವಾ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಸೌಲಭ್ಯಗಳು ಅಥವಾ ಸ್ಥಳಗಳು ಮತ್ತು ಅಂಥ ಪ್ರತಿಯೊಂದು ಅರ್ಜಿಯ ಮೇಲೆ ಸಕ್ಷಮ ಪ್ರಾಧಿಕಾರವು ತೆಗೆದುಕೊಂಡ ಕ್ರಮವನ್ನು ಒಳಗೊಂಡ ವಿವರಣಾ ಪತ್ರ; ಮತ್ತು

(ಎಫ್) ಅರ್ಜಿಯು ಆದೇಶದ ವಿಸ್ತರಣೆಗಾಗಿ ಇದ್ದಲ್ಲಿ, ತಡೆದು ಪ್ರತ್ಯೇಕಿಸುವ ಮೂಲಕ ಇದುವರೆಗೆ ಪಡೆದ ಫಲಿತಾಂಶಗಳನ್ನು ಅಥವಾ ಅಂಥ ಫಲಿತಾಂಶಗಳನ್ನು ಪಡೆಯಲು ವಿಫಲವಾದುದಕ್ಕೆ ಸಮಂಜಸವಾದ ವಿವರಣೆಯನ್ನು ತಿಳಿಸುವ ಒಂದು ವಿವರಣಾ ಪತ್ರ.

(೩) ಸಕ್ಷಮ ಪ್ರಾಧಿಕಾರವು ಅರ್ಜಿಯ ಸಮರ್ಥನೆಗಾಗಿ ಹೆಚ್ಚುವರಿ ಬಾಯಿಮಾತಿನ ಅಥವಾ ದಸ್ತಾವೇಜಿನ ಸಾಕ್ಷ್ಯವನ್ನು ಒದಗಿಸುವಂತೆ ಅರ್ಜಿದಾರನು ಅಗತ್ಯಪಡಿಸಬಹುದು.

(೪) ಅಂಥ ಅರ್ಜಿಯ ಮೇಲೆ, ಸಕ್ಷಮ ಪ್ರಾಧಿಕಾರವು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ತರುವಾಯ ಅರ್ಜಿಯನ್ನು ತಿರಸ್ಕರಿಸಬಹುದು ಅಥವಾ ಕೋರಿಕೊಂಡಂತೆ ಅಥವಾ ಮಾರ್ಪಡಿಸಿದ ರೂಪದಲ್ಲಿ ಅರ್ಜಿದಾರನು ಸಲ್ಲಿಸಿದ ವಾಸ್ತವಾಂಶಗಳ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರವು ಈ ಮುಂದಿನಂತೆ ನಿರ್ಧರಿಸಿದರೆ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸುವ ಅಥವಾ ಅನುಮೋದಿಸುವ ಆದೇಶವನ್ನು ಹೊರಡಿಸಬಹುದು; ಎಂದರೆ:–

(ಎ) ಒಬ್ಬ ವ್ಯಕ್ತಿಯು ೩ ಮತ್ತು ೪ನೇ ಪ್ರಕರಣಗಳ ಅಡಿಯಲ್ಲಿ ವಿವರಿಸಿದ ಮತ್ತು ದಂಡನೀಯವಾದ ಒಂದು ನಿರ್ದಿಷ್ಟ ಅಪರಾಧವನ್ನು ಮಾಡುತ್ತಿದ್ದಾನೆ, ಮಾಡಿದ್ದಾನೆ ಅಥವಾ ಮಾಡಲಿದ್ದಾನೆ ಎಂದು ನಂಬಬಹುದಾದ ಕಾರಣ ಇದೆ;

(ಬಿ) ಅಪರಾಧಕ್ಕೆ ಸಂಬಂಧಿಸಿದ ನಿರ್ದಿಷ್ಟ ಸಂಪರ್ಕಗಳನ್ನು ಹಾಗೆ ತಡೆದು ಪ್ರತ್ಯೇಕಿಸುವ ಮೂಲಕ ಪಡೆಯಲಾಗುವುದು ಎಂದು ನಂಬಬಹುದಾದ ಕಾರಣ ಇದೆ;

(ಸಿ) ವಿಚಾರಣೆ ಮತ್ತು ಗುಪ್ತವಾರ್ತಾ ಸಂಗ್ರಹಕ್ಕೆ ಸಂಬಂಧಿಸಿದ ಸಾಮಾನ್ಯ ವಿಧಾನಗಳನ್ನು ಕೈಗೊಳ್ಳಲಾಗಿದೆ ಮತ್ತು ಅವು ವಿಫಲವಾಗಿವೆ ಅಥವಾ ಪ್ರಯತ್ನ ಕೈಗೊಂಡರೆ ಸಫಲವಾಗುವ ಸಂಭವವಿಲ್ಲವೆಂದು ಕಂಡುಬರುತ್ತದೆ ಅಥವಾ ಅತ್ಯಂತ ಅಪಾಯಕಾರಿಯಾಗಿದೆ ಅಥವಾ ತಡೆದು ಪ್ರತ್ಯೇಕಿಸುವ ಕಾರ್ಯಾಚರಣೆಗೆ ಸಂಬಂಧಿಸಿದವರ ಗುರುತನ್ನು ಬಹಿರಂಗಪಡಿಸುವ ಸಾಧ್ಯತೆ ಇದೆ;

(ಡಿ) ಯಾವ ಸೌಲಭ್ಯಗಳಿಂದ ಅಥವಾ ಸ್ಥಳದಿಂದ ಅಂಥ ಅಪರಾಧ ಮಾಡುವುದಕ್ಕೆ ಸಂಬಂಧಿಸಿದಂತೆ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸಬೇಕಾಗಿದೆಯೋ ಅಥವಾ ಬಳಸಲಾಗಿದೆ ಅಥವಾ ಸದ್ಯದಲ್ಲೇ ಬಳಸಲಾಗುವುದೋ ಅವುಗಳನ್ನು ಅಂಥ ವ್ಯಕ್ತಿಗೆ ಗುತ್ತಿಗೆಗೆ ನೀಡಲಾಗಿದೆ ಅಥವಾ ಅವುಗಳು ಅವನ ಹೆಸರಿನಲ್ಲಿ ಇವೆ ಅಥವಾ ಸಾಮಾನ್ಯವಾಗಿ ಉಪಯೋಗಿಸಲಾಗಿದೆ ಎಂದು ನಂಬಬಹುದಾದ ಕಾರಣವಿದೆ.

(೫) ಈ ಪ್ರಕರಣದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸುವ ಅಥವಾ ಅನುಮೋದಿಸುವ ಪ್ರತಿಯೊಂದು ಆದೇಶವು ಇವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(ಎ) ಯಾವ ವ್ಯಕ್ತಿಯ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸಲಾಗುವುದೋ ಆ ವ್ಯಕ್ತಿಯ ಗುರುತು ತಿಳಿದಿದ್ದರೆ, ಆ ಗುರುತು;

(ಬಿ) ಯಾವ ಸಂಪರ್ಕ ಸೌಲಭ್ಯಗಳಿಂದ ಅಥವಾ ಯಾವ ಸ್ಥಳದಿಂದ ತಡೆದು ಪ್ರತ್ಯೇಕಿಸಲು ಅಧಿಕಾರ ನೀಡಲಾಗಿದೆಯೋ ಅದರ ಸ್ವರೂಪ ಮತ್ತು ಅದು ಇರುವ ಸ್ಥಳ;

(ಸಿ) ತಡೆದು ಪ್ರತ್ಯೇಕಿಸಬೇಕೆಂದು ಕೋರಲಾದ ಸಂಪರ್ಕ ಮಾದರಿಯ ನಿರ್ದಿಷ್ಟ ವಿವರಣೆ ಮತ್ತು ಅದು ಸಂಬಂಧಪಡುವ ನಿರ್ದಿಷ್ಟ ಅಪರಾಧದ ಒಂದು ವಿವರಣಾ ಪತ್ರ;

(ಡಿ) ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದಕ್ಕೆ ಅಧಿಕೃತಗೊಳಿಸಲಾದ ಏಜೆನ್ಸಿಯ ಮತ್ತು ಅರ್ಜಿಗಳನ್ನು ಅಧಿಕೃತಗೊಳಿಸುವ ವ್ಯಕ್ತಿಯ ಗುರುತು;

(ಇ) ಯಾವ ಕಾಲಾವಧಿಯಲ್ಲಿ ಹಾಗೆ ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸಲಾಗಿದೆಯೋ ಆ ಅವಧಿ ಮತ್ತು ವಿವರಿಸಲಾದ ಸಂಪರ್ಕವನ್ನು ಮೊದಲು ಪಡೆದಾಗ ತಡೆದು ಪ್ರತ್ಯೇಕಿಸುವ ಕ್ರಿಯೆಯು ತನ್ನಷ್ಟಕ್ಕೆ ತಾನೇ ಮುಕ್ತಾಯವಾಗುತ್ತದೆಯೇ ಅಥವಾ ಇಲ್ಲವೇ ಎನ್ನುವ ವಿವರಣಾ ಪಟ್ಟಿ.

(೬) (೪)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಿದ ಕೂಡಲೇ, ಆದರೆ, ಯಾವುದೇ ಸಂದರ್ಭದಲ್ಲಿ ಆದೇಶವನ್ನು ಹೊರಡಿಸಿದ ಏಳು ದಿನಗಳನ್ನು ಮೀರದಂತೆ ಸಕ್ಷಮ ಪ್ರಾಧಿಕಾರವು ಅದರ ಒಂದು ಪ್ರತಿಯನ್ನು ೧೬ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಪರಿಶೀಲನಾ ಸಮಿತಿಗೆ ಸಂಬಂಧಪಟ್ಟ ಕಾಗದಪತ್ರಗಳು, ದಾಖಲೆಗಳು ಮತ್ತು ಸದರಿ

ಆದೇಶದ ಸಂಬಂಧದಲ್ಲಿ ಅವನ ಸ್ವಂತ ತೀರ್ಮಾನಗಳು ಇತ್ಯಾದಿಗಳೊಂದಿಗೆ ಪರಿಶೀಲನೆಗಾಗಿ ಮತ್ತು ಪರಿಶೀಲನಾ ಸಮಿತಿಯಿಂದ ಆದೇಶದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

(೭) ಈ ಪ್ರಕರಣದ ಅಡಿಯಲ್ಲಿ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸುವ ಆದೇಶವು, ಅರ್ಜಿದಾರನ ಬೇಡಿಕೆಯ ಮೇಲೆ, ವೈರ್ ಅಥವಾ ಎಲೆಕ್ಟ್ರಾನಿಕ್ ಸಂಪರ್ಕಸೇವೆ ಒದಗಿಸುವವನು, ಭೂ ಮಾಲೀಕನು, ಅಭಿರಕ್ಷಕನು ಅಥವಾ ಇತರ ವ್ಯಕ್ತಿಯು ಅರ್ಜಿದಾರನಿಗೆ ಕೂಡಲೇ ಎಲ್ಲಾ ಮಾಹಿತಿ, ಸೌಲಭ್ಯಗಳು ಹಾಗೂ ತಡೆದು ಪ್ರತ್ಯೇಕಿಸುವ ಯಾವುದೇ ತಡೆ ಇಲ್ಲದೆ ನೆರವೇರಿಸಲು ಅವಶ್ಯಕವಾಗಿರುವ ತಾಂತ್ರಿಕ ಸಹಾಯವನ್ನು ಮತ್ತು ಯಾರ ಸಂಪರ್ಕವನ್ನು ತಡೆದು ಪ್ರತ್ಯೇಕಿಸಬೇಕಾಗಿದೆಯೋ ಆ ವ್ಯಕ್ತಿಗೆ ಅಂಥ ಸೇವೆ ಒದಗಿಸುವನು, ಭೂಮಾಲಿಕನು, ಅಭಿರಕ್ಷಕನು ಅಥವಾ ವ್ಯಕ್ತಿಯು ಒದಗಿಸುತ್ತಿರುವ ಸೇವೆಗಳಿಗೆ ಕನಿಷ್ಟ ಆತಂಕ ಉಂಟಾಗುವಂತೆ ಒದಗಿಸತಕ್ಕದ್ದು.

(೮) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಯಾವುದೇ ಆದೇಶವು ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸುವ ಉದ್ದೇಶವನ್ನು ಸಾಧಿಸಲು ಅಗತ್ಯವಿರುವುದಕ್ಕಿಂತ ಹೆಚ್ಚಿನ ಅವಧಿಗೆ ಅಥವಾ ಯಾವುದೇ ಸಂದರ್ಭದಲ್ಲಿ ಅರವತ್ತು ದಿವಸಗಳಿಗಿಂತ ಹೆಚ್ಚಾಗಿ ಅಧಿಕೃತಗೊಳಿಸಕೂಡದು ಅಥವಾ ಅನುಮೋದಿಸಕೂಡದು. ಅಂಥ ಅರವತ್ತು ದಿನಗಳ ಅವಧಿಯು ತನಿಖಾಧಿಕಾರಿಯು ಅಥವಾ ಕಾನೂನು ಜಾರಿ ಮಾಡುವ ಅ ಧಿಕಾರಿಯು ಆ ಆದೇಶದ ಮೇರೆಗೆ ತಡೆದು ಪ್ರತ್ಯೇಕಿಸುವುದನ್ನು ಮೊದಲ ಬಾರಿಗೆ ಪ್ರಾರಂಭ ಮಾಡಿದ ದಿನದ ನಿಕಟ ಪೂರ್ವದ ದಿನದ ಅಥವಾ ಆದೇಶ ಹೊರಡಿಸಿದ ಹತ್ತು ದಿನಗಳ ತರುವಾಯ, ಇವುಗಳ ಪೈಕಿ ಯಾವುದು ಮೊದಲೋ ಅಂದಿನಿಂದ ಆರಂಭವಾಗತಕ್ಕದ್ದು. ಆದೇಶದ ವಿಸ್ತರಣೆಯನ್ನು ಮಂಜೂರು ಮಾಡಬಹುದು. ಆದರೆ ಅದು (೧)ನೇ ಉಪಪ್ರಕರಣದ ಅನುಸಾರವಾಗಿ ವಿಸ್ತರಣೆಗಾಗಿ ಅರ್ಜಿ ಸಲ್ಲಿಸಿದ ಮೇಲೆ ಮತ್ತು (೪)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದ ಕಾರಣಗಳನ್ನು ಸಕ್ಷಮ ಪ್ರಾ ಧಿಕಾರವು ದಾಖಲಿಸಿದ ಮೇಲೆ ಮಾತ್ರ ಮಾಡಬಹುದು. ವಿಸ್ತರಣೆಯ ಅವಧಿಯು ಯಾವ ಉದ್ದೇಶಗಳಿಗಾಗಿ ಅದನ್ನು ಮಂಜೂರು ಮಾಡಲಾಗಿದೆಯೋ ಅವುಗಳನ್ನು ಸಾಧಿಸುವುದಕ್ಕೆ ಅವಶ್ಯಕವಾಗಿದೆ ಎಂದು ಸಕ್ಷಮ ಪ್ರಾಧಿಕಾರವು ಭಾವಿಸುವುದಕ್ಕಿಂತ ಅಧಿಕವಾಗಿರತಕ್ಕದ್ದಲ್ಲ ಮತ್ತು ಯಾವುದೇ ಸಂದರ್ಭದಲ್ಲಿ ಒಂದು ಬಾರಿಗೆ ಅರವತ್ತು ದಿನಗಳಿಗಿಂತ ಅಧಿಕವಾಗಿರಕೂಡದು. ಪ್ರತಿಯೊಂದು ಆದೇಶವು ಮತ್ತು ಅದರ ವಿಸ್ತರಣೆಯು, ತಡೆದು ಪ್ರತ್ಯೇಕಿಸುವುದರ ಅಧಿಕೃತಗೊಳಿಸುವಿಕೆಯನ್ನು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಜಾರಿಗೊಳಿಸತಕ್ಕದ್ದು ಮತ್ತು ಈ ಪ್ರಕರಣದ ಅಡಿಯಲ್ಲಿ ತಡೆದು ಪ್ರತ್ಯೇಕಿಸುವುದಕ್ಕೆ ಅನ್ಯಥಾ ಒಳಪಡದ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸುವುದನ್ನು ಕನಿಷ್ಟಗೊಳಿಸುವ ಅಂಥ ವಿಧಾನದಲ್ಲಿ ನೆರವೇರಿಸತಕ್ಕದ್ದು ಮತ್ತು ಅಧಿಕೃತಗೊಳಿಸಿದ ಉದ್ದೇಶವು ಸಾಧನೆಯಾದ ಮೇಲೆ ಅಥವಾ ಯಾವುದೇ ಸಂದರ್ಭದಲ್ಲಿ ಆದೇಶದ ಅವಧಿಯು ಮುಕ್ತಾಯವಾದ ಮೇಲೆ ಕೊನೆಗೊಳ್ಳತಕ್ಕದ್ದು ಎಂಬ ಉಪಬಂಧವನ್ನು ಒಳಗೊಂಡಿರತಕ್ಕದ್ದು. ತಡೆದು ಪ್ರತ್ಯೇಕಿಸಿದ ಸಂಪರ್ಕವು ಸಂಕೇತ ರೂಪದಲ್ಲಿ ಅಥವಾ ವಿದೇಶೀ ಭಾಷೆಯಲ್ಲಿದ್ದ ಸಂದರ್ಭದಲ್ಲಿ ಮತ್ತು ಆ ವಿದೇಶೀ ಭಾಷೆಯ ಅಥವಾ ಸಂಕೇತದ ತಜ್ಞನು ತಡೆದು ಪ್ರತ್ಯೇಕಿಸಿದ ಅವಧಿಯಲ್ಲಿ ಯುಕ್ತವಾಗಿ ಲಭ್ಯವಿಲ್ಲದಿದ್ದಲ್ಲಿ, ಹಾಗೆ ತಡೆದು ಪ್ರತ್ಯೇಕಿಸಿದ ನಂತರ ಕಾರ್ಯಸಾಧ್ಯವಾದಷ್ಟು ಬೇಗನೆ ತಡೆದು ಪ್ರತ್ಯೇಕಿಸುವುದನ್ನು ಕನಿಷ್ಟ ಅವಧಿಯೊಳಗೆ ಪೂರ್ಣಗೊಳಿಸಬಹುದು. ಈ ಪ್ರಕರಣದ ಅಡಿಯಲ್ಲಿ ತಡೆದು ಪ್ರತ್ಯೇಕಿಸುವ ಕಾರ್ಯವನ್ನು ಪೂರ್ಣವಾಗಿ ಅಥವಾ ಭಾಗಶ: ಸರ್ಕಾರಿ ನೌಕರನಿಂದ ಅಥವಾ ರಾಜ್ಯ ಸರ್ಕಾರದೊಂದಿಗೆ ಕರಾರಿನ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯಿಂದ, ತಡೆದು ಪ್ರತ್ಯೇಕಿಸುವುದನ್ನು ನಿರ್ವಹಿಸಲು ಅಧಿಕೃತಗೊಳಿಸಲಾದ ತನಿಖಾ ಅಧಿಕಾರಿ ಅಥವಾ ಕಾನೂನು ಜಾರಿ ಮಾಡುವ ಅಧಿಕಾರಿಯ ಮೇಲ್ವಿಚಾರಣೆಯಲ್ಲಿ ನಡೆಸತಕ್ಕದ್ದು.

(೯) ಈ ಪ್ರಕರಣದ ಅನುಸರಣೆಯಲ್ಲಿ ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸುವ ಆದೇಶವನ್ನು ಹೊರಡಿಸದಾಗಲೆಲ್ಲ, ಅಧಿಕೃತಗೊಳಿಸುವ ಉದ್ದೇಶದ ಸಾಧನೆಯಲ್ಲಿ ಪ್ರಗತಿಯಾಗಿದೆ ಮತ್ತು ತಡೆದು ಪ್ರತ್ಯೇಕಿಸುವುದನ್ನು ಮುಂದುವರಿಸುವ ಅಗತ್ಯವಿದೆ ಎಂದು ತೋರಿಸುವ ವರದಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಆದೇಶವು ಅಗತ್ಯಪಡಿಸಬಹುದು. ಅಂಥ ವರದಿಗಳನ್ನು ಸಕ್ಷಮ ಪ್ರಾಧಿಕಾರವು ಅಗತ್ಯಪಡಿಸಬಹುದಾದ ಅಂಥ ಅಂತರಗಳಲ್ಲಿ ಸಲ್ಲಿಸತಕ್ಕದ್ದು.

(೧೦) ಈ ಪ್ರಕರಣದ ಇತರ ಯಾವುದೇ ಉಪಬಂಧದಲ್ಲಿ, ಏನೇ ಒಳಗೊಂಡಿದ್ದರೂ, ಹೆಚ್ಚುವರಿ ಪೋಲೀಸ್ ಮಹಾ ನಿರ್ದೇಶಕರ ದರ್ಜೆಗಿಂತ ಕಡಿಮೆ ದರ್ಜೆಯಲ್ಲದ ಒಬ್ಬ ಅಧಿಕಾರಿಯು,–

(ಎ) ಈ ಮುಂದಿನವುಗಳನ್ನು ಒಳಗೊಂಡ ತುರ್ತು ಪರಿಸ್ಥಿತಿ ಇದೆಯೆಂದು,–

(i) ಯಾವೊಬ್ಬ ವ್ಯಕ್ತಿಗೆ ಮರಣದ ಅಥವಾ ತೀವ್ರ ದೈಹಿಕ ಗಾಯದ ತಕ್ಷಣದ ಅಪಾಯ;

(ii) ರಾಜ್ಯದ ಭದ್ರತೆ ಅಥವಾ ಹಿತಾಸಕ್ತಿಗೆ ಬೆದರಿಕೆಯುಂಟುಮಾಡುವ ಪಿತೂರಿಕಾರಕ ಚಟುವಟಿಕೆಗಳು; ಅಥವಾ

(iii) ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸುವ ಸಕ್ಷಮ ಪ್ರಾಧಿಕಾರದಿಂದ ಯುಕ್ತ ಶ್ರದ್ಧೆಯೊಂದಿಗೆ ಒಂದು ಆದೇಶವನ್ನು ಪಡೆಯುವುದಕ್ಕೆ ಮೊದಲೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸಲು ಅಗತ್ಯವಾದ, ವ್ಯವಸ್ಥಿತ ಅಪರಾಧದ ಗುಣಲಕ್ಷಣವುಳ್ಳ ಪಿತೂರಿಕಾರಕ ಚಟುವಟಿಕೆಗಳು; ಮತ್ತು

(ಬಿ) ಅಂಥ ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸಲು ಈ ಪ್ರಕರಣದಡಿಯಲ್ಲಿ ಒಂದು ಆದೇಶವನ್ನು ಹೊರಡಿಸಲು ಆಧಾರಗಳಿವೆ ಎಂದು ಅವನು ಯುಕ್ತವಾಗಿ ನಿರ್ಧರಿಸಿದಾಗ ತನಖಾಧಿಕಾರಿಗೆ ಲಿಖಿತದ ಮೂಲಕ ಅಂಥ ವೈರ್, ಎಲೆಕ್ಟ್ರಾನಿಕ್, ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದಕ್ಕೆ, ತಡೆದು ನಿಲ್ಲಿಸುವುದು, ಸಂಭವಿಸಿದ ಅಥವಾ ಸಂಭವಿಸಲು ತೊಡಗಿದ ತರುವಾಯದ ನಲವತ್ತೆಂಟು ಗಂಟೆಗಳ ಒಳಗೆ (೧) ಮತ್ತು (೨)ನೇ ಉಪ ಪ್ರಕರಣಗಳ ಉಪಬಂಧಗಳಿಗೆ ಅನುಸಾರವಾಗಿ ತಡೆದು ಪ್ರತ್ಯೇಕಿಸುವುದನ್ನು ಅನುಮೋದಿಸುವ ಒಂದು ಆದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಿದಾಗ ಅಧಿಕೃತಗೊಳಿಸಬಹುದು.

(೧೧) (೧೦)ನೇ ಉಪ ಪ್ರಕರಣದ ಅಡಿಯಲ್ಲಿ ತಡೆದು ಪ್ರತ್ಯೇಕಿಸುವುದರ ಅನುಮೋದನೆಯ ಒಂದು ಆದೇಶವು ಇಲ್ಲದಿರುವಲ್ಲಿ, ಅಪೇಕ್ಷಿಸಿದ ಮಾಹಿತಿಯು ಲಭ್ಯವಾದಾಗ ಅಥವಾ ಆದೇಶಕ್ಕಾಗಿ ಅರ್ಜಿಯನ್ನು ತಿರಸ್ಕರಿಸಿದಾಗ ಇವುಗಳಲ್ಲಿ ಯಾವುದು ಮೊದಲೋ ಆಗ ಅಂಥ ತಡೆದು ಪ್ರತ್ಯೇಕಿಸುವಿಕೆಯು ಕೂಡಲೇ ಮುಕ್ತಾಯಗೊಳ್ಳತಕ್ಕದ್ದು. (೪)ನೇ ಉಪ ಪ್ರಕರಣದ ಅಡಿಯಲ್ಲಿ ತಡೆದು ಪ್ರತ್ಯೇಕಿಸುವುದಕ್ಕೆ ಅನುಮತಿಗಾಗಿನ ಅರ್ಜಿಯನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಅಥವಾ (೧೦)ನೇ ಉಪ ಪ್ರಕರಣದ ಅಡಿಯಲ್ಲಿ ಅನುಮೋದನೆಗಾಗಿನ ಅರ್ಜಿಯನ್ನು ತಿರಸ್ಕರಿಸಿದ ಸಂದರ್ಭದಲ್ಲಿ ಅಥವಾ ಒಂದು ಆದೇಶವನ್ನು ಹೊರಡಿಸದೆ ತಡೆದು ಪ್ರತ್ಯೇಕಿಸುವುದನ್ನು ಮುಕ್ತಾಯಗೊಳಿಸಿದ ಯಾವುದೇ ಇತರ ಸಂದರ್ಭದಲ್ಲಿ, ತಡೆದು ಪ್ರತ್ಯೇಕಿಸಿದ ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದ ಅಂಶಗಳನ್ನು ಈ ಪ್ರಕರಣದ ಉಲ್ಲಂಘನೆಯಲ್ಲಿ ಪಡೆದಿರುವುದಾಗಿ ಪರಿಗಣಿಸತಕ್ಕದ್ದು.

(೧೨) (ಎ) ಈ ಪ್ರಕರಣದ ಮೂಲಕ ಅಧಿಕೃತಗೊಂಡ ಯಾವುದೇ ಸಾಧನಗಳ ಮೂಲಕ ತಡೆದು ಪ್ರತ್ಯೇಕಿಸಲಾದ ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದ ಅಂಶಗಳನ್ನು ಸಾಧ್ಯವಾದರೆ ಟೇಪ್‌ನಲ್ಲಿ ಅಥವಾ ವೈರ್ ಅಥವಾ ಇತರೆ ಅಂತಹವೇ ಸಾಧನಗಳಲ್ಲಿ ಅಭಿಲೇಖಿಸತಕ್ಕದ್ದು. ಈ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದ ಅಂಶಗಳನ್ನು ಅಭಿಲೇಖಿಸುವ ಕಾರ್ಯವನ್ನು ಸಂಕಲನ ಅಥವಾ ಇತರೆ ಮಾರ್ಪಾಟುಗಳಿಂದ ರಕ್ಷಿಸುವ ರೀತಿಯಲ್ಲಿ ಅಭಿಲೇಖಿಸುವ ಕಾರ್ಯವನ್ನು ಮಾಡತಕ್ಕದ್ದು. ಆದೇಶದ ಅವಧಿಯ ಅಥವಾ ಅದರ ವಿಸ್ತರಣೆಯ ಮುಕ್ತಾಯದ ತರುವಾಯ ಕೂಡಲೇ ಹಾಗೆ ಅಭಿಲೇಖಿಸಿರುವುದನ್ನು ಅಂಥ ಆದೇಶ ಹೊರಡಿಸುವ ಸಕ್ಷಮ ಪ್ರಾಧಿಕಾರಕ್ಕೆ ದೊರೆಯುವಂತೆ ಮಾಡತಕ್ಕದ್ದು ಮತ್ತು ಅವನ ನಿರ್ದೇಶನಗಳ ಮೇರೆಗೆ ಮೊಹರು ಮಾಡತಕ್ಕದ್ದು. ಅಭಿಲೇಖಿಸಿರುವುದರ ಅಭಿರಕ್ಷೆಯನ್ನು ಸಕ್ಷಮ ಪ್ರಾಧಿಕಾರವು ಆದೇಶಿಸಿದಾಗಲೆಲ್ಲಾ ಮಾಡತಕ್ಕದ್ದು. ಸಕ್ಷಮ ಪ್ರಾಧಿಕಾರದ ಆದೇಶದ ಹೊರತು ಅವುಗಳನ್ನು ನಾಶ ಪಡಿಸತಕ್ಕದ್ದಲ್ಲ ಮತ್ತು ಯಾವುದೇ ಸಂದರ್ಭದಲ್ಲೂ ಹತ್ತು ವರ್ಷಗಳವರೆಗೆ ಅವುಗಳನ್ನು ಸಂರಕ್ಷಿಸತಕ್ಕದ್ದು.

(ಬಿ) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಅರ್ಜಿಗಳು ಮತ್ತು ಹೊರಡಿಸಲಾದ ಆದೇಶಗಳನ್ನು ಸಕ್ಷಮ ಪ್ರಾಧಿಕರವು ಮೊಹರು ಮಾಡತಕ್ಕದ್ದು. ಅರ್ಜಿಗಳ ಮತ್ತು ಆದೇಶಗಳ ಅಭಿರಕ್ಷೆಯು, ಸಕ್ಷಮ ಪ್ರಾಧಿಕಾರವು ನಿರ್ದೇಶಿಸಿದ ಕಡೆಯಲ್ಲಿ ಇರತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರದ ನಿರ್ದೇಶನದ ಹೊರತು ಅವುಗಳನ್ನು ನಾಶಪಡಿಸತಕ್ಕದ್ದಲ್ಲ ಮತ್ತು ಯಾವುದೇ ಸಂದರ್ಭದಲ್ಲಿಯೂ ಹತ್ತು ವರ್ಷಗಳವರೆಗೆ ಅವುಗಳನ್ನು ಇಟ್ಟಿರತಕ್ಕದ್ದು. ಪ್ರಸ್ತಾವವನ್ನು ಸಲ್ಲಿಸಿದ ಮೇಲೆ ಸಕ್ಷಮ ಪ್ರಾಧಿಕಾರವು ತನ್ನ ವಿವೇಚನೆಯಲ್ಲಿ ಅಂಥ ವ್ಯಕ್ತಿಗೆ ಅಥವಾ ಅವನ ನ್ಯಾಯವಾದಿಗೆ, ನ್ಯಾಯಿಕ ಹಿತಾಸಕ್ತಿಯಲ್ಲಿ ಸಕ್ಷಮ ಪ್ರಾಧಿಕಾರವು ನಿರ್ಧರಿಸಬಹುದಾದ ಅಂಥ ತಡೆದು ಪ್ರತ್ಯೇಕಿಸಿದ ಸಂಪರ್ಕಗಳು, ಅರ್ಜಿಗಳು ಮತ್ತು ಆದೇಶಗಳ ಭಾಗಗಳನ್ನು ಪರಿಶೀಲನೆಗಾಗಿ ಲಭ್ಯವಿರುವಂತೆ ಮಾಡಬಹುದು.

(೧೩) ಸಂಹಿತೆಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಅಡಿಯಲ್ಲಿ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸಿದ ಮೂಲಕ ಸಂಗ್ರಹಿಸಲಾದ ಸಾಕ್ಷ್ಯಗಳನ್ನು ಮೊಕದ್ದಮೆಯ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ ಆಪಾದಿತನ ವಿರುದ್ಧ ಸಾಕ್ಷಿ ಎಂಬುದಾಗಿ ಅಂಗೀಕರಸತಕ್ಕದ್ದು:

ಪರಂತು, ಈ ಪ್ರಕರಣದ ಅನುಸಾರ ತಡೆದು ಪ್ರತ್ಯೇಕಿಸಿದ ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದ ಅಂಶಗಳನ್ನು ಅಥವಾ ಅದರಿಂದ ಪಡೆದ ಸಾಕ್ಷ್ಯವನ್ನು ಯಾವುದೇ ನ್ಯಾಯಾಲಯದಲ್ಲಿ, ಯಾವುದೇ ವಿಚಾರಣೆ, ಸುನಾವಣೆ ಅಥವಾ ಇತರ ವ್ಯವಹರಣೆಯಲ್ಲಿ, ಆ ವಿಚಾರಣೆ, ಸುನಾವಣೆ ಅಥವಾ ವ್ಯವಹರಣೆಗೆ ಮೊದಲು ಹತ್ತು ದಿನಗಳಿಗೆ ಕಡಿಮೆ ಇಲ್ಲದಂತೆ, ಯಾವುದರ ಮೇರೆಗೆ ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸಲಾಗಿತ್ತೋ ಅಥವಾ ಅನುಮೋದಿಸಲಾಗಿತ್ತೋ ಆ ಸಕ್ಷಮ ಪ್ರಾಧಿಕಾರದ ಆದೇಶದ ಪ್ರತಿಯನ್ನು ಅದರ ಜೊತೆಗಿರುವ ಅರ್ಜಿಯನ್ನು, ಪ್ರತಿಯೊಬ್ಬ ಪಕ್ಷಕಾರನಿಗೆ ಒದಗಿಸಿದ ಹೊರತು, ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದಲ್ಲ ಅಥವಾ ಬಹಿರಂಗ ಪಡಿಸತಕ್ಕದ್ದಲ್ಲ;

ಮತ್ತು ಪರಂತು, ವಿಚಾರಣೆ, ಸುನಾವಣೆ ಅಥವಾ ವ್ಯವಹರಣೆಗೆ ಹತ್ತು ದಿನಗಳ ಮೊದಲು ಮೇಲ್ಕಂಡ ಮಾಹಿತಿಯನ್ನು ಪಕ್ಷಕಾರನಿಗೆ ಅವುಗಳನ್ನು ಒದಗಿಸಲು ಸಾಧ್ಯವಾಗದಿದ್ದಲ್ಲಿ ಮತ್ತು ಅಂಥ ಮಾಹಿತಿಯನ್ನು ಸ್ವೀಕರಿಸುವಲ್ಲಿ ತಡವಾಗಿದ್ದರಿಂದ ಪಕ್ಷಕಾರನಿಗೆ ಪ್ರತಿಕೂಲವಾಗುವುದಿಲ್ಲವೆಂದು ಕಂಡುಬಂದಲ್ಲಿ, ಸದರಿ ಹತ್ತು ದಿನಗಳ ಅವಧಿಯನ್ನು ವಿಷಯದ ಅಧಿವಿಚಾರಣೆ ಮಾಡುವ ನ್ಯಾಯಾಧೀಶರು ಮನ್ನಾ ಮಾಡಬಹುದು.

೧[**ವಿವರಣೆ**]೧.– ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) 'ವೈರ್ ಸಂಪರ್ಕ' ಎಂದರೆ, ಸ್ವಿಚ್ಚಿಂಗ್ ಸ್ಟೇಷನ್ನಲ್ಲಿ ಅಂಥ ಜೋಡಣೆಯ ಬಳಕೆಯೂ ಒಳಗೊಂಡಂತೆ ಮೂಲ ಪಾಯಿಂಟ್ ಮತ್ತು ಸ್ವೀಕೃತಿ ಪಾಯಿಂಟ್‌ಗಳ ನಡುವೆ ವೈರ್, ಕೇಬಲ್ ಅಥವಾ ಇತರೆ ಅಂಥ ಜೋಡಣೆಯ ನೆರವಿನ ಮೂಲಕ ಸಂಪರ್ಕದ ಪ್ರಸರಣಕ್ಕಾಗಿ ಅನುಕೂಲತೆಗಳ ಬಳಕೆಯ ಮೂಲಕ ಪೂರ್ಣವಾಗಿ ಅಥವಾ ಭಾಗಶ: ಮಾಡಿದ ಯಾವುದೇ ಶ್ರವಣ ಮಾಧ್ಯಮದ ಮೂಲಕ ವರ್ಗಾವಣೆ ಮತ್ತು ಅಂಥ ಪದವು, ಅಂಥ ಸಂಪರ್ಕದ ಯಾವುದೇ ಎಲೆಕ್ಟ್ರಾನಿಕ್ ಸಂಗ್ರಹಣಾವನ್ನು ಒಳಗೊಳ್ಳುತ್ತದೆ.

(ಬಿ) 'ಬಾಯಿಮಾತಿನ ಸಂಪರ್ಕ' ಎಂದರೆ, ಒಬ್ಬ ವ್ಯಕ್ತಿಯು ಯಾವುದೇ ಸಂಪರ್ಕವು ತಡೆದು ಪ್ರತ್ಯೇಕಿಸುವುದಕ್ಕೆ ಒಳಪಡುವುದಿಲ್ಲ ಎಂಬ ನಿರೀಕ್ಷೆಯನ್ನು ಪ್ರದರ್ಶಿಸುವ ಅಂಥ ನಿರೀಕ್ಷೆಯನ್ನು ಸಮರ್ಥಿಸುವ ಸನ್ನಿವೇಶಗಳಲ್ಲಿಯು ಅತನು ಹೇಳಿದ ಅಂಥ ಯಾವುದೇ ಬಾಯಿಮಾತಿನ ಸಂಪರ್ಕ. ಆದರೆ, ಅಂಥ ಪದವು ಯಾವುದೇ ಎಲೆಕ್ಟ್ರಾನಿಕ್ ಸಂಪರ್ಕವನ್ನು ಒಳಗೊಳ್ಳುವುದಿಲ್ಲ.

(ಸಿ) 'ಎಲೆಕ್ಟ್ರಾನಿಕ್ ಸಂಪರ್ಕ' ಎಂದರೆ, ಒಳನಾಡಿನ ಅಥವಾ ವಿದೇಶಿ ವಾಣಿಜ್ಯದ ಮೇಲೆ ಪರಿಣಾಮ ಬೀರುವ ವೈರ್, ರೇಡಿಯೋ, ಎಲೆಕ್ಟ್ರೋಮ್ಯಾಗ್ನೆಟಿಕ್, ಫೋಟೋ ಎಲೆಕ್ಟ್ರಾನಿಕ್ ಅಥವಾ ಫೋಟೋ ಆಪ್ಟಿಕಲ್ ವ್ಯವಸ್ಥೆಯ ಮೂಲಕ ಸಂಪೂರ್ಣವಾಗಿ ಅಥವಾ ಭಾಗಶ: ರವಾನಿಸಲಾದ ಯಾವುವೇ ಚಿಹ್ನೆಗಳು, ಸಂಕೇತಗಳು, ಬರಹ, ಪ್ರತಿಬಿಂಬಗಳು, ಶಬ್ದಗಳು, ಮಾಹಿತಿ ಅಥವಾ ಯಾವುವೇ ಸ್ವರೂಪದ ಗುಪ್ತವಾರ್ತೆಯ ಯಾವುದೇ ವರ್ಗಾವಣೆ; ಆದರೆ, ಈ ಮುಂದಿನವುಗಳನ್ನು ಒಳಗೊಳ್ಳುವುದಿಲ್ಲ,–

(i) ವೈರ್‌ಲೆಸ್ ಟೆಲಿಫೋನ್ ಹ್ಯಾಂಡ್ ಸೆಟ್ ಮತ್ತು ಮೂಲ ಘಟಕದ ನಡುವೆ ರವಾನಿಸಲಾಗುವ ಕಾರ್ಡ್‌ಲೆಸ್ ಟೆಲಿಫೋನು ಸಂಪರ್ಕದ ರೇಡಿಯೋ ಭಾಗ;

(ii) ಯಾವುದೇ ವೈರ್ ಅಥವಾ ಬಾಯಿಮಾತಿನ ಸಂಪರ್ಕ;

(iii) ಟೋನ್ ಓನ್ಲಿ ಪೇಜಿಂಗ್ ಸಾಧನದ ಮೂಲಕ ಮಾಡಲಾಗುವ ಯಾವುದೇ ಸಂಪರ್ಕ; ಅಥವಾ

(iv) ಟ್ರ್ಯಾಕಿಂಗ್ ಸಲಕರಣೆಯಿಂದ ಮಾಡಲಾಗುವ ಯಾವುದೇ ಸಂಪರ್ಕ;

(ಡಿ) ‘‘ತಡೆದು ಪ್ರತ್ಯೇಕಿಸುವುದು’’ ಎಂದರೆ, ಯಾವುದೇ ಎಲೆಕ್ಟ್ರಾನಿಕ್, ಯಾಂತ್ರಿಕ ಅಥವಾ ಇತರ ಸಾಧನದ ಬಳಕೆಯ ಮೂಲಕ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದಿಂದ ಒಳಾಂಶಗಳನ್ನು ಕಿವಿಗೆ ಕೇಳುವ ಅಥವಾ ಇತರ ವಸ್ತುಗಳನ್ನು ಸಂಗ್ರಹಿಸುವುದು.

೧. ತಿದ್ದೋಲೆ ಸಂಖ್ಯೆ: ಸಂವ್ಯಶಾಇ ೫೩ ಶಾಸನ ೨೦೦೦, ದಿನಾಂಕ: ೧೦..೧.೨೦೦೩

**೧೫. ಸೆಲ್ಲ್ಯುಲರ್ ಫೋನ್‌ಗಳ ಬಗ್ಗೆ ವಿಶೇಷ ಉಪಬಂಧಗಳು.–** (೧) ಈ ಅಧಿನಿಯಮದ ಅಡಿಯಲ್ಲಿ ಒಂದು ವ್ಯವಸ್ಥಿತ ಅಪರಾಧದ ಪರಿಶೋಧನೆಯ ಮೇಲ್ವಿಚಾರಣೆ ಮಾಡುತ್ತಿರುವ ಪೋಲೀಸ್ ಸೂಪರಿಂಟೆಂಡೆಂಟ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಪೋಲೀಸ್ ಅಧಿಕಾರಿಯ, ಲಿಖಿತದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಯಾವುದೇ ಅಪರಾಧಿಕ ಕೃತ್ಯ ಅಥವಾ ಒಳಸಂಚಿಗಾಗಿ ಬಳಸಲಾಗುತ್ತಿದೆ ಎಂದು ಯುಕ್ತವಾಗಿ ಸಂದೇಹಿಸಲಾದ ಯಾವುದೇ ಮೊಬೈಲ್ ಫೋನನ್ನು ನಿಷ್ಕ್ರಿಯಗೊಳಿಸುವಂತೆ ಅಥವಾ ಮೊಬೈಲ್ ಫೋನಿನಿಂದ ಅಥವಾ ಅದಕ್ಕೆ ಮಾಡುವ ಕರೆಗಳ ಸಂಪರ್ಕ ತಪ್ಪಿಸುವಂತೆ ಸೆಲ್ಯೂಲರ್ ಫೋನ್ ಆಪರೇಟರನಿಗೆ ನಿರ್ದೇಶಿಸುವಂತೆ ಆದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು. ಅಂಥ ಸಕ್ಷಮ ಪ್ರಾಧಿಕಾರವು ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸೆಲ್ಯೂಲರ್ ಫೋನ್ ಆಪರೇಟರುಗಳಿಗೆ, ಒಂದು ಸಾಮಾನ್ಯ ಅಥವಾ ನಿರ್ಧಿಷ್ಟ ಆದೇಶದ ಮೂಲಕ, ಸಿಮ್ ಕಾರ್ಡ್ ಖರೀದಿದಾರರ ಮತ್ತು ಅವರಿಂದ ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಒಂದು ನಿರ್ದಿಷ್ಟ ಅವಧಿಯಲ್ಲಿ ಒದಗಿಸಲಾದ ಸಿಮ್ ಕಾರ್ಡ್‌ಗಳ ವಿವರಗಳನ್ನು ಒದಗಿಸುವಂತೆ ಸಹ ನಿರ್ದೇಶಿಸಬಹುದು. ಮೇಲೆ ಹೇಳಿದ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸದ ವ್ಯಕ್ತಿಗೆ ಕೂಡಲೇ ಅಗತ್ಯಪಡಿಸಿದ ಮಾಹಿತಿಯನ್ನು ಒದಗಿಸುವುದು ಅಂಥ ಸೆಲ್ಯೂಲರ್ ಫೋನ್ ಆಪರೇಟರುಗಳಿಗೆ ಕಡ್ಡಾಯವಾಗಿರತಕ್ಕದ್ದು.

(೨) (೧)ನೇ ಉಪ ಪ್ರಕರಣದ ಅಡಿಯಲ್ಲಿ ನೀಡಲಾದ ಯಾವುವೇ ನಿರ್ದೇಶನಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**೧೬. ಅಧಿಕೃತಗೊಳಿಸುವ ಆದೇಶಗಳ ಪರಿಶೀಲನೆಗಾಗಿ, ಪರಿಶೀಲನಾ ಸಮಿತಿಯ ರಚನೆ.–** (೧) ಸಕ್ಷಮ ಪ್ರಾಧಿಕಾರವು ೧೪ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವನ್ನು ಅಥವಾ ಆ ಪ್ರಕರಣದ (೧೦)ನೇ ಉಪ ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಹೊರಡಿಸಿದ ಪ್ರತಿಯೊಂದು ಆದೇಶವನ್ನು ಪರಿಶೀಲಿಸಲು ಒಂದು ಪರಿಶೀಲನಾ ಸಮಿತಿ ಇರತಕ್ಕದ್ದು.

(೨) ಪರಿಶೀಲನಾ ಸಮಿತಿಯು, ಈ ಮುಂದಿನ ಪದನಿಮಿತ್ತ ಸದಸ್ಯರನ್ನು ಹೊರಡಿಸತಕ್ಕದ್ದು, ಎಂದರೆ,–

(i) ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ .......ಅಧ್ಯಕ್ಷರು

(ii) ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ ಕರ್ನಾಟಕ ಸರ್ಕಾರ ........ಸದಸ್ಯರು

(iii) ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ
ಕರ್ನಾಟಕ ಸರ್ಕಾರ .......ಸದಸ್ಯರು

(೩) [೧][೧೪ನೇ ಪ್ರಕರಣದ][೧] ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಯು ಅಥವಾ ಆ ಪ್ರಕರಣದ (೧೦)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಜಾರಿಗೊಳಿಸಿದ ಪ್ರತಿಯೊಂದು ಆದೇಶವನ್ನು ಪರಿಶೀಲನಾ ಸಮಿತಿಯ ಮುಂದೆ ಇಡತಕ್ಕದ್ದು ಮತ್ತು ಅದನ್ನು ಸ್ವೀಕರಿಸಿದ ತರುವಾಯ ಹತ್ತು ದಿನಗಳ ಒಳಗೆ ಪರಿಶೀಲನಾ ಸಮಿತಿಯು ೧೪ನೇ ಪ್ರಕರಣದ (೪)ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಅಧಿಕೃತಗೊಳಿಸಿದ ಅಥವಾ ಅನುಮೋದಿಸಿದ ಅಥವಾ ತುರ್ತು ಪರಿಸ್ಥಿತಿಯಲ್ಲಿ ಆ ಪ್ರಕರಣದ (೧೦)ನೇ ಉಪ ಪ್ರಕರಣದ ಅಡಿಯಲ್ಲಿ ಸಂಬಂಧಪಟ್ಟ ಅಧಿಕಾರಿಯು ಜಾರಿಗೊಳಿಸಿದ, ತಡೆದು ಪ್ರತ್ಯೇಕಿಸುವ ಅಥವಾ ತಡೆದು ಪ್ರತ್ಯೇಕಿಸುವುದನ್ನು ಅನುಮೋದಿಸಿದ ಆದೇಶವು ಅವಶ್ಯಕವಾಗಿತ್ತೇ, ಸೂಕ್ತವಾಗಿತ್ತೇ ಮತ್ತು ನ್ಯಾಯೋಚಿತವಾಗಿತ್ತೇ ಎಂಬುದನ್ನು ತೀರ್ಮಾನಿಸುವ ಸಲುವಾಗಿ ಪರಿಗಣಿಸತಕ್ಕದ್ದು.

೧. ತಿದ್ದೋಲೆ ಸಂಖ್ಯೆ: ಸಂವ್ಯಶಾಇ ೫೩ ಶಾಸನ ೨೦೦೦, ದಿನಾಂಕ: ೨೬.೦೬.೨೦೦೨

(೪) ಪರಿಶೀಲನಾ ಸಮಿತಿಯು, ಸಂಪೂರ್ಣ ದಾಖಲೆಯನ್ನು ಪರೀಕ್ಷಿಸಿದ ತರುವಾಯ ಮತ್ತು ಅವಶ್ಯಕವೆಂದು ಪರಿಗಣಿಸಲಾದ ಅಂಥ ವಿಚಾರಣೆ ಯಾವುದಾದರೂ ಇದ್ದಲ್ಲಿ, ಅದನ್ನು ನಡೆಸಿದ ನಂತರ ಸಕ್ಷಮ ಪ್ರಾಧಿಕಾರಿಯು ಜಾರಿಗೊಳಿಸಿದ ಅಥವಾ ೧೪ನೇ ಪ್ರಕರಣದ (೧೦)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಕಾರಿಯು ಜಾರಿಗೊಳಿಸಿದ ಆದೇಶವನ್ನು ಲಿಖಿತದ ಮೂಲಕ ಅನುಮೋದಿಸಬಹುದು ಅಥವಾ ಅದನ್ನು ಅನುಮೋದಿಸದಿರುವ ಬಗ್ಗೆ ಆದೇಶವನ್ನು ಜಾರಿಗೊಳಿಸಬಹುದು. ಪರಿಶೀಲನಾ ಸಮಿತಿಯು ಅನುಮೋದಿಸದಿರುವ ಬಗ್ಗೆ ಆದೇಶವನ್ನು ಜಾರಿಗೊಳಿಸಿದ ತರುವಾಯ ತಡೆದು ಪ್ರತ್ಯೇಕಿಸುವ ಯಾವುದೇ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿದ್ದರೆ, ಅದನ್ನು ಕೂಡಲೇ ನಿಲ್ಲಿಸತಕ್ಕದ್ದು. ಟೇಪ್, ವೈರ್ ಅಥವಾ ಇತರೆ ಸಾಧನದ ರೂಪದಲ್ಲಿರುವ ತಡೆದು ಪ್ರತ್ಯೇಕಿಸಿದ ಸಂಪರ್ಕ, ಯಾವುದಾದರೂ ಇದ್ದಲ್ಲಿ, ಅದನ್ನು ಯಾವುದೇ ಪ್ರಕರಣದಲ್ಲಿಯೂ ಸಾಕ್ಷ್ಯ ಎಂಬುದಾಗಿ ಅನುಮತಿಸತಕ್ಕದ್ದಲ್ಲ ಮತ್ತು ಅದನ್ನು ನಾಶಪಡಿಸಲು ನಿರ್ದೇಶಿಸತಕ್ಕದ್ದು.

೧೭. **ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕಗಳನ್ನು ತಡೆದು ಪ್ರತ್ಯೇಕಿಸುವುದಕ್ಕೆ ಹಾಗೂ ಅವುಗಳನ್ನು ಬಹಿರಂಗಪಡಿಸುವುದಕ್ಕೆ ನಿಷೇಧ.**– ೧೪ನೇ ಪ್ರಕರಣದಲ್ಲಿ ಅನ್ಯಥಾ ನಿರ್ದಿಷ್ಟವಾಗಿ ಉಪಬಂಧಿಸಿದ ಹೊರತು, ಯಾವೊಬ್ಬ ಪೋಲೀಸ್ ಅಧಿಕಾರಿಯು, ಅವನು, –

(ಎ) ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ಉದ್ದೇಶಪೂರ್ವಕವಾಗಿ ತಡೆದು ಪ್ರತ್ಯೇಕಿಸಿದರೆ, ತಡೆದು ಪ್ರತ್ಯೇಕಿಸಲು ಪ್ರಯತ್ನಿಸಿದರೆ ಅಥವಾ ತಡೆದು ಪ್ರತ್ಯೇಕಿಸಲು ಅಥವಾ ತಡೆದು ಪ್ರತ್ಯೇಕಿಸಲು ಪ್ರಯತ್ನಿಸುವುದಕ್ಕೆ ಯಾವೊಬ್ಬ ಇತರ ವ್ಯಕ್ತಿಯನ್ನು ದೊರಕಿಸಿದರೆ,–

(ಬಿ) ಯಾವುದೇ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದಕ್ಕೆ, ಯಾವುದೇ ಎಲೆಕ್ಟ್ರಾನಿಕ್, ಮೆಕ್ಯಾನಿಕಲ್ ಅಥವಾ ಇತರೆ ಸಾಧನವನ್ನು ಉದ್ದೇಶಪೂರ್ವಕವಾಗಿ ಬಳಸಿದರೆ, ಬಳಸಲು ಪ್ರಯತ್ನಿಸಿದರೆ ಅಥವಾ ಬಳಸುವುದಕ್ಕೆ ಅಥವಾ ಬಳಸಲು ಪ್ರಯತ್ನಿಸುವುದಕ್ಕೆ ಯಾವೊಬ್ಬ ಇತರ ವ್ಯಕ್ತಿಯನ್ನು ದೊರಕಿಸಿದರೆ ಹಾಗೂ ಆ ಸಂದರ್ಭದಲ್ಲಿ,–

(i) ಅಂಥ ಸಾಧನವನ್ನು ಒಂದು ವೈರ್, ಕೇಬಲ್ ಅಥವಾ ವೈರ್ ಸಂಪರ್ಕದಲ್ಲಿ ಬಳಸಿದ ಅಂಥ ಇತರ ಜೋಡಣೆಗೆ ಜೋಡಿಸಲಾಗಿದ್ದರೆ ಅಥವಾ ಅನ್ಯಥಾ ಅದರ ಮೂಲಕ ಒಂದು ಸಿಗ್ನಲ್‌ನ್ನು ರವಾನಿಸಿದರೆ; ಅಥವಾ

(ii) ಅಂಥ ಸಾಧನವು ಸಂಪರ್ಕಗಳನ್ನು ರೇಡಿಯೋ ಮೂಲಕ ರವಾನಿಸುತ್ತಿದ್ದರೆ ಅಥವಾ ಅಂಥ ಸಂಪರ್ಕಗಳ ಪ್ರಸರಣಕ್ಕೆ ಹಸ್ತಕ್ಷೇಪ ಮಾಡಿದರೆ;

(ಸಿ) ಈ ಉಪ ಪ್ರಕರಣದ ಉಲ್ಲಂಘನೆಯಲ್ಲಿ ಒಂದು ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವ ಮೂಲಕ ಮಾಹಿತಿಯನ್ನು ಪಡೆಯಲಾಗಿತ್ತು ಎಂಬುದನ್ನು ತಿಳಿದಿದ್ದು ಅಥವಾ ತಿಳಿಯಲು ಕಾರಣವಿದ್ದು, ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದ ಒಳಾಂಶಗಳನ್ನು ಉದ್ದೇಶಪೂರ್ವಕವಾಗಿ ಬಹಿರಂಗಪಡಿಸಿದರೆ ಅಥವಾ ಬಹಿರಂಗಪಡಿಸಲು ಪ್ರಯತ್ನಿಸಿದರೆ;

(ಡಿ) ಈ ಉಪ ಪ್ರಕರಣದ ಉಲ್ಲಂಘನೆಯಲ್ಲಿ ಒಂದು ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವ ಮೂಲಕ ಮಹಿತಿಯನ್ನು ಪಡೆಯಲಾಗಿತ್ತು ಎಂಬುದನ್ನು ತಿಳಿದಿದ್ದು ಅಥವಾ ತಿಳಿಯಲು ಕಾರಣವಿದ್ದು ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದ ಒಳಾಂಶಗಳಗನ್ನು ಉದ್ದೇಶಪೂರ್ವಕವಾಗಿ ಬಳಸಿದರೆ ಅಥವಾ ಬಳಸಲು ಪ್ರಯತ್ನಿಸಿದರೆ; ಅಥವಾ

(ಇ) (i) ೧೪ನೇ ಪ್ರಕರಣದ ಮೂಲಕ ಅಧಿಕೃತಗೊಳಿಸಲಾದ ಸಾಧನಗಳ ಮೂಲಕ ತಡೆದು ಪ್ರತ್ಯೇಕಿಸಲಾದ ಯಾವುದೇ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕದ ವಸ್ತುಗಳನ್ನು ಉದ್ದೇಶಪೂರ್ವಕವಾಗಿ ಇತರ ವ್ಯಕ್ತಿಗೆ ಬಹಿರಂಗಪಡಿಸಿದರೆ ಅಥವಾ ಬಹಿರಂಗಪಡಿಸಲು ಪ್ರಯತ್ನಿಸಿದರೆ;

(ii) ಈ ಅಧಿನಿಯಮದ ಅಡಿಯಲ್ಲಿ ಒಂದು ಕ್ರಿಮಿನಲ್ ತನಿಖೆಯ ಸಂಬಂಧದಲ್ಲಿ ಅಂಥ ಒಂದು ಸಂಪರ್ಕವನ್ನು ತಡೆದು ಪ್ರತ್ಯೇಕಿಸುವ ಮೂಲಕ ಮಾಹಿತಿಯನ್ನು ಪಡೆಯಲಾಯಿತು ಎಂಬುದನ್ನು ತಿಳಿದಿದ್ದರೆ ಅಥವಾ ತಿಳಿಯಲು ಕಾರಣವಿದ್ದರೆ;

(iii) ಒಂದು ಕ್ರಿಮಿನಲ್ ತನಿಖೆಯ ಸಂಬಂಧದಲ್ಲಿ ಯಾವುದೇ ಮಾಹಿತಿಯನ್ನು ಪಡೆದಿದ್ದರೆ ಅಥವಾ ದಾಖಲಿಸಿದ್ದರೆ; ಮತ್ತು

(iv) ಒಂದು ಯುಕ್ತ ಅಧಿಕೃತ ಕ್ರಿಮಿನಲ್ ತನಿಖೆಗೆ ಅನುಚಿತ ಅಡ್ಡಿ ಉಂಟು ಮಾಡಿದ್ದರೆ, ಅಡಚಣೆಯುಂಟು ಮಾಡಿದ್ದರೆ ಅಥವಾ ಹಸ್ತಕ್ಷೇಪ ಮಾಡಲು ಉದ್ದೇಶಿಸಿದ್ದರೆ; ಅಥವಾ

(v) ೧೬ನೇ ಪ್ರಕರಣದ (೪)ನೇ ಉಪ ಪ್ರಕರಣದ ಅಡಿಯಲ್ಲಿ ಪರಿಶೀಲನಾ ಸಮಿತಿಯು ಅನುಮೋದಿಸದಿರುವ ನಿರ್ದಿಷ್ಟ ಆದೇಶದ ತರುವಾಯವೂ ವೈರ್, ಎಲೆಕ್ಟ್ರಾನಿಕ್ ಅಥವಾ ಬಾಯಿಮಾತಿನ ಸಂಪರ್ಕವನ್ನು ತಡೆದು ಪ್ರತ್ಯೇಕಿಸುವುದನ್ನು ಉದ್ದೇಶಪೂರ್ವಕವಾಗಿ ಮುಂದುವರೆಸಿದರೆ;

ಅಂಥ ಉಲ್ಲಂಘನೆಗೆ, ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

೧೮. **ಸಾಕ್ಷ್ಯದ ವಿಶೇಷ ನಿಯಮಗಳು.–** (೧) ಸಂಹಿತೆಯಲ್ಲಿ ಅಥವಾ ಸಾಕ್ಷ ಅಧಿನಿಯಮ, ೧೮೭೨ರಲ್ಲಿ ಒಳಗೊಂಡಿರುವುದಕ್ಕೆ ವಿರುದ್ಧವಾದುದು ಏನೇ ಇದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳ ಅಥವಾ ಸಂಬಂಧಪಟ್ಟ ಅಪರಾಧಗಳ ವಿಚಾರಣೆ ಮತ್ತು ಶಿಕ್ಷೆಯ ಉದ್ದೇಶಗಳಿಗಾಗಿ ನ್ಯಾಯಾಲಯವು ಈ ಮುಂದಿನ ವಾಸ್ತವಾಂಶಗಳನ್ನು ಪ್ರಮಾಣೀಕರಣ ಮೌಲ್ಯ ಹೊಂದಿರುವುದೆಂಬಂತೆ ಪರಿಗಣಿಸಬಹುದಾಗಿದೆ, ಆಪಾದಿತನು,–

(ಎ) ಹಿಂದಿನ ಯಾವುದೇ ಸಂದರ್ಭದಲ್ಲಿ ಸಂಹಿತೆಯ ೧೦೭ನೇ ಪ್ರಕರಣದ ಅಥವಾ ೧೧೦ನೇ ಪ್ರಕರಣದ ಅಡಿಯಲ್ಲಿ ಬಂಧಿತನಾಗಿದ್ದನು;

(ಬಿ) ಪ್ರತಿಬಂಧಕ ಸ್ಥಾನಬದ್ಧತೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಅಡಿಯಲ್ಲಿ ತಡೆಹಿಡಿಯಲ್ಪಟ್ಟಿದ್ದನು; ಅಥವಾ

(ಸಿ) ಈ ಹಿಂದಿನ ಯಾವುದೇ ಸಂದರ್ಭದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ವಿಶೇಷ ನ್ಯಾಯಾಲಯದಲ್ಲಿ ಕಾನೂನು ಕ್ರಮಕ್ಕೆ ಒಳಪಟ್ಟಿದ್ದನು.

(೨) ಯಾವೊಬ್ಬ ವ್ಯಕ್ತಿಯು ವ್ಯವಸ್ಥಿತ ಅಪರಾಧದಲ್ಲಿ ತೊಡಗಿರುವುದಾಗಿ ಅಥವಾ ಯಾವೊಬ್ಬ ವ್ಯಕ್ತಿಯು ಅವನ ಪರವಾಗಿ ಚರ ಅಥವಾ ಸ್ಥಿರ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುವುದಾಗಿ ಅಥವಾ ಯಾವುದೇ ಸಮಯದಲ್ಲಿ ಹೊಂದಿದ್ದು ರುಜುತಾದಾಗ ಮತ್ತು ಆ ಬಗ್ಗೆ ಆತನು ತೃಪ್ತಿಕರವಾಗಿ ಲೆಕ್ಕ ಕೊಡಲು ಸಾಧ್ಯವಾಗದಿದ್ದಾಗ ವಿಶೇಷ ನ್ಯಾಯಾಲಯವು ಅದಕ್ಕೆ ವಿರುದ್ಧವಾದುದನ್ನು ರುಜುವಾತುಪಡಿಸದ ಹೊರತು, ಅಂಥ ಸ್ವತ್ತು ಅಥವಾ ಆರ್ಥಿಕ ಸಂಪನ್ಮೂಲಗಳನ್ನು ಕಾನೂನು ಬಾಹಿರ ಚಟುವಟಿಕೆಗಳ ಮೂಲಕ ಆರ್ಜಿಸಲಾಗಿದೆ ಅಥವಾ ಬಂದಿದ್ದು ಎಂಬುದಾಗಿ ಪೂರ್ವಭಾವನೆ ಮಾಡತಕ್ಕದ್ದು.

(೩) ಆಪಾದಿತನು, ಯಾವೊಬ್ಬ ವ್ಯಕ್ತಿಯನ್ನು ಅಪಹರಿಸಿದ್ದನೆಂದು ಅಥವಾ ಅಪಹರಣ ಮಾಡಿದ್ದಾನೆಂದು ರುಜುವಾತಾದರೆ ಸುಲಿಗೆ ಹಣಕ್ಕಾಗಿ ಹಾಗೆ ಮಾಡಲಾಗಿತ್ತೆಂದು ವಿಶೇಷ ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು.

೧೯. **ಪೋಲೀಸ್ ಅಧಿಕಾರಿಗಳ ಮುಂದೆ ಮಾಡಿದ ಕೆಲವು ತಪ್ಪೊಪ್ಪಿಗೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು.–** (೧) ಸಂಹಿತೆಯಲ್ಲಿ ಅಥವಾ ಭಾರತ ಸಾಕ್ಷ್ಯ ಅಧಿನಿಯಮ, ೧೮೭೨ರಲ್ಲಿ ಏನೇ ಇದ್ದರೂ, ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪೋಲೀಸ್ ಸೂಪರಿಂಟೆಂಡೆಂಟ್ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಪೋಲೀಸ್ ಅಧಿಕಾರಿಯ ಮುಂದೆ ಒಬ್ಬ ವ್ಯಕ್ತಿಯು ಮಾಡಿರುವ ಮತ್ತು ಅಂಥ ಪೋಲೀಸ್ ಅಧಿಕಾರಿಯು ಲಿಖಿತದಲ್ಲಿ ಅಥವಾ ಶಬ್ಧಗಳು ಅಥವಾ ಪ್ರತಿರೂಪಗಳನ್ನು ಪುನರುತ್ಪಾದಿಸಬಹುದಾದ ಕ್ಯಾಸೆಟ್ ಗಳು, ಟೇಪ್‌ಗಳು ಅಥವಾ ಧ್ವನಿಸುರಳಿಗಳಂಥ ಯಾವುದೇ ಯಾಂತ್ರಿಕ ಸಾಧನೆಗಳಲ್ಲಿ ಮೇಲೆ ಅಭಿಲೇಖಿಸಿರುವ, ಒಂದು ತಪ್ಪೊಪ್ಪಿಗೆಯನ್ನು ಅಂಥ ವ್ಯಕ್ತಿಯ ಅಥವಾ ಸಹ ಆಪಾದಿತನ, ದುಷ್ಪ್ರೇರಕ ಅಥವಾ ಪತೂರಿಗಾರನ ವಿಚಾರಣೆಯಲ್ಲಿ ಅನುಮತಿಸತಕ್ಕದ್ದು.

ಪರಂತು, ಸಹ ಆಪಾದಿತ, ದುಷ್ಪ್ರೇರದ ಅಥವಾ ಪತೂರಿಗಾರನನ್ನು, ಆಪಾದಿತನೊಂದಿಗೆ ಅದೇ ಮೊಕದ್ದಮೆಯಲ್ಲಿ ಆಪಾದಿತನನ್ನಾಗಿಸತಕ್ಕದ್ದು ಮತ್ತು ವಿಚಾರಣೆ ನಡೆಸಿರತಕ್ಕದ್ದು.

(೨) ತಪ್ಪೊಪ್ಪಿಗೆಯನ್ನು, ವ್ಯಕ್ತಿಯನ್ನು ವಿಚಾರಣೆ ಮಾಡಿದ ಮತ್ತು ಅವನಿಂದ ಹೇಳಲಾದ ಭಾಷೆಯಲ್ಲಿಯೇ, ಮುಕ್ತ ವಾತಾವರಣದಲ್ಲಿ ಅಭಿಲೇಖಿಸತಕ್ಕದ್ದು.

(೩) ಪೋಲೀಸ್ ಅಧಿಕಾರಿಯು, (೧)ನೇ ಉಪ ಪ್ರಕರಣದ ಅಡಿಯಲ್ಲಿ ಯಾವುದೇ ತಪ್ಪೊಪ್ಪಿಗೆಯನ್ನು ಅಭಿಲೇಖಿಸುವುದಕ್ಕೆ ಮೊದಲು ಅವನು ತಪ್ಪೊಪ್ಪಿಗೆಯನ್ನು ಮಾಡಲು ಬದ್ದನಾಗಿಲ್ಲ ಮತ್ತು ಅವನು ಹಾಗೆ ತಪ್ಪೊಪ್ಪಿಗೆ ಮಾಡಿದರೆ ಅದನ್ನು ಅವನ ವಿರುದ್ಧ ಸಾಕ್ಷ್ಯವಾಗಿ ಬಳಸಬಹುದು ಎಂಬುದನ್ನು ತಪ್ಪೊಪ್ಪಿಗೆ ಮಾಡುವ ವ್ಯಕ್ತಿಗೆ ವಿವರಿಸತಕ್ಕದ್ದು. ಮತ್ತು ಅಂಥ ಪೋಲೀಸ್ ಅಧಿಕಾರಿಯು ಅಂಥ ಯಾವುದೇ ತಪ್ಪೊಪ್ಪಿಗೆಯನ್ನು, ಅದನ್ನು ಮಾಡುವ ವ್ಯಕ್ತಿಯನ್ನು ಪ್ರಶ್ನಿಸಿದ ಮೇಲೆ, ಅದನ್ನು ಸ್ವಇಚ್ಛೆಯಿಂದ ಮಾಡಲಾಗುತ್ತಿದೆ ಎಂದು ಸಮಾಧಾನ ಹೊಂದಿದ ಹೊರತು, ಅಭಿಲೇಖಿಸತಕ್ಕದ್ದಲ್ಲ. ಅಂಥ ಸ್ವಇಚ್ಛೆಯ ತಪ್ಪೊಪ್ಪಿಗೆಯನ್ನು ಅಭಿಲೇಖಿಸಿದ ತರುವಾಯ ಸಂಬಂದಪಟ್ಟ ಪೋಲೀಸ್ ಅಧಿಕಾರಿಯು ತಪ್ಪೊಪ್ಪಿಗೆಯ ಕೆಳಗೆ, ಅಂಥ ತಪ್ಪೊಪ್ಪಿಗೆಯ ಸ್ವಇಚ್ಛಾಸ್ವರೂಪದ ಬಗ್ಗೆ ತನ್ನ ವೈಯಕ್ತಿಕ ಸಮಾಧಾನದ ಬಗ್ಗೆ ಲಿಖಿತದಲ್ಲಿ ಪ್ರಾಮಾಣೀಕರಿಸಿ ಅದರ ದಿನಾಂಕ ಮತ್ತು ಸಮಯವನ್ನು ನಮೂದಿಸತಕ್ಕದ್ದು.

(೪) (೧)ನೇ ಉಪ ಪ್ರಕರಣದ ಅಡಿಯಲ್ಲಿ ಅಭಿಲೇಖಿಸಲಾದ ಪ್ರತಿಯೊಂದು ತಪ್ಪೊಪ್ಪಿಗೆಯನ್ನು ಅಂಥ ತಪ್ಪೊಪ್ಪಿಗೆಯನ್ನು ಅಭಿಲೇಖಿಸಿದ ಪ್ರದೇಶವು ಯಾವ ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದೋ ಅವರಿಗೆ ತಕ್ಷಣ ಕಳಹಿಸಿಕೊಡತಕ್ಕದ್ದು ಮತ್ತು ಅಂಥ ಮ್ಯಾಜಿಸ್ಟ್ರೇಟರು ಹಾಗೆ ಸ್ವೀಕರಿಸಿದ ಅಭಿಲೇಖಿಸಲಾದ ತಪ್ಪೊಪ್ಪಿಗೆಯನ್ನು ವಿಶೇಷ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು. ಅಲ್ಲಿ ಅದು ಅಪರಾದದ ಸಂಜ್ಞೇಯತೆಯನ್ನು ಕೈಗೆತ್ತಿಕೊಳ್ಳಬಹುದು.

(೫) (೧)ನೇ ಉಪ ಪ್ರಕರಣದ ಅಡಿಯಲ್ಲಿ ಯಾವ ವ್ಯಕ್ತಿಯಿಂದ ತಪ್ಪೊಪ್ಪಿಗೆಯನ್ನು ಅಭಿಲೇಖಿಸಲಾಗಿದೆಯೋ ಆತನನ್ನು (೩)ನೇ ಉಪ ಪ್ರಕರಣದ ಅಡಿಯಲ್ಲಿ ತಪ್ಪೊಪ್ಪಿಗೆಯನ್ನು ಯಾವ ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟರ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ಕಳುಹಿಸಬೇಕಾಗಿದೆಯೋ ಅವರ ಮುಂದೆ ಲಿಖಿತ ಅಥವಾ ಯಾಂತ್ರಿಕೃತ ಮಾದ್ಯಮದ ಮೇಲೆ ಅಭಿಲೇಖಿಸಿದ ತಪ್ಪೊಪ್ಪಿಗೆಯ ಮೂಲ ಹೇಳಿಕೆಯ ಜೊತೆಯಲ್ಲಿ ಯಾವುದೇ ಅನುಚಿತ ವಿಳಂಬವಿಲ್ಲದೆ ಹಾಜರುಪಡಿಸತಕ್ಕದ್ದು.

(೬) ಮುಖ್ಯ ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟರನು ಹಾಗೆ ಹಾಜರುಪಡಿಸಿದ ಅಪರಾಧಿಯು ಯಾವುದಾದರೂ ಹೇಳಿಕೆಯನ್ನು ನೀಡಿದರೆ ಅದನ್ನು ಅತ್ಯಂತ ಎಚ್ಚರಿಕೆಯಿಂದ ಅಭಿಲೇಖಿಸಕ್ಕದ್ದು ಮತ್ತು ಸಹಿಯನ್ನು ಪಡೆದುಕೊಳ್ಳತಕ್ಕದ್ದು. ಚಿತ್ರ ಹಿಂಸೆಯ ಯಾವುದೇ ದೂರಿನ ಸಂದರ್ಭದಲ್ಲಿ ಅಪರಾಧಿಯನ್ನು, ಸಹಾಯಕ ಸಿವಿಲ್ ಸರ್ಜನ್ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಆರೋಗ್ಯ ಅಧಿಕಾರಿಯ ಮುಂದೆ ಆರೋಗ್ಯ ತಪಾಸಣೆಗಾಗಿ ಹಾಜರುಪಡಿಸುವಂತೆ ನಿರ್ದೇಶಿಸತಕ್ಕದ್ದು.

**೨೦. ಸಾಕ್ಷಿದಾರನ ಸಂರಕ್ಷಣೆ.–** (೧) ಸಂಹಿತೆಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವಿಶೇಷ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿಯ ವ್ಯವಹರಣೆಗಳನ್ನು ರಹಸ್ಯವಾಗಿ ನಡೆಸಬಹುದೆಂದು ಇಚ್ಛಿಸಿದರೆ, ಅದು ಹಾಗೆ ಮಾಡಬಹುದು.

(೨) ವಿಶೇಷ ನ್ಯಾಯಾಲಯವು ತನ್ನ ಮುಂದಿನ ಯಾವುದೇ ವ್ಯವಹರಣೆಯಲ್ಲಿ ಒಬ್ಬ ಸಾಕ್ಷಿದಾರನಿಂದ ಅಥವಾ ಅಂಥ ಸಾಕ್ಷಿದಾರನ ಸಂಬಂಧದಲ್ಲಿ ಸರ್ಕಾರಿ ವಕೀಲರಿಂದ ಮಾಡಿದ ಯಾವುದೇ ಮನವಿಯ ಮೇಲೆ ಅಥವಾ ತಾನಾಗಿಯೇ, ಯಾವುದೇ ಸಾಕ್ಷಿಯ ಗುರುತು ಮತ್ತು ವಿಳಾಸಗಳ ರಹಸ್ಯ ಇಡಲು ತಾನು ಸೂಕ್ತವೆಂದು ಭಾವಿಸುವ ಅಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(೩) ವಿಶೇಷವಾಗಿ ಮತ್ತು (೨)ನೇ ಉಪ ಪ್ರಕರಣದ ಉಪಬಂಧಗಳ ಸಾಮಾನ್ಯತೆಗೆ ಬಾಧಕವಾಗದಂತೆ ಆ ಉಪ ಪ್ರಕರಣದ ಅಡಿಯಲ್ಲಿ ವಿಶೇಷ ನ್ಯಾಯಾಲಯವು ಕೈಗೊಳ್ಳಬಹುದಾದ ಕ್ರಮಗಳು ಈ ಮುಂದಿನವುಗಳನ್ನು ಒಳಗೊಂಡಿರಬಹುದು;

(ಎ) ವಿಶೇಷ ನ್ಯಾಯಾಲಯವು ನಿರ್ಧರಿಸಬಹುದಾದ ಸ್ಥಳದಲ್ಲಿ ವ್ಯವಹರಣೆಗಳನ್ನು ನಡೆಸುವುದು,

(ಬಿ) ಅದರ ಆದೇಶಗಳಲ್ಲಿ ಅಥವಾ ತೀರ್ಪುಗಳಲ್ಲಿ ಅಥವಾ ಸಾರ್ವಜನಿಕರಿಗೆ ಅವಕಾಶವಿರುವ ಮೊಕದ್ದಮೆಯ ಯಾವುವೇ ದಾಖಲೆಗಳಲ್ಲಿ ಸಾಕ್ಷಿದಾರರ ಹೆಸರುಗಳು ಮತ್ತು ವಿಳಾಸಗಳನ್ನು ನಮೂದಿಸುವುದನ್ನು ತಪ್ಪಿಸುವುದು,

(ಸಿ) ಸಾಕ್ಷಿದಾರರ ವಿಳಾಸಗಳು ಮತ್ತು ಗುರುತನ್ನು ಕಪಾಡುವ ಸಲುವಾಗಿ ಅವುಗಳನ್ನು ಬಹಿರಂಗಪಡಿಸಕೂಡದೆಂದು ಯಾವುವೇ ನಿರ್ದೇಶನಗಳನ್ನು ಹೊರಡಿಸುವುದು,

(ಡಿ) ಅಂಥ ನ್ಯಾಯಾಲಯದ ಮುಂದೆ ಬಾಕಿ ಇರುವ ಎಲ್ಲಾ ಅಥವಾ ಯಾವುವೇ ವ್ಯವಹಾರಗಳನ್ನು ಯಾವುದೇ ರೀತಿಯಲ್ಲಿ ಪ್ರಕಟಿಸತಕ್ಕದ್ದಲ್ಲವೆಂದು ಸಾರ್ವಜನಿಕ ಹಿತದೃಷ್ಟಿಯಿಂದ ಆದೇಶಿಸುವುದು.

(೪) (೩)ನೇ ಉಪ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ನಿರ್ದೇಶನವನ್ನು ಉಲ್ಲಂಘಿಸಿದ ಯಾವೊಬ್ಬ ವ್ಯಕ್ತಿಯು ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**೨೧. ಸ್ವತ್ತಿನ ಮುಟ್ಟುಗೋಲು ಮತ್ತು ಜಪ್ತಿ.–** ಒಬ್ಬ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ದೋಷಸಿದ್ಧಿಯಾಗಿರುವಲ್ಲಿ ವಿಶೇಷ ನ್ಯಾಯಾಲಯವು, ಯಾವುದೇ ದಂಡನೆಯನ್ನು ವಿಧಿಸುವುದರ ಜೊತೆಗೆ, ಲಿಖಿತ ಆದೇಶದ ಮೂಲಕ, ಅಪರಾದಿಗೆ ಸೇರಿದ ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಿದ, ಯಾವುದೇ ಚರ ಅಥವಾ ಸ್ಥಿರ ಅಥವಾ ಇವೆರಡು ಸ್ವತ್ತು ಎಲ್ಲಾ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದೆಂದು ಘೋಷಿಸಬಹುದು.

(ಎ) ೧೪ನೇ ಪ್ರಕರಣದ (೧)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಮೇಲ್ವಿಚಾರಣ ಅಧಿಕಾರಿಯ ಅನುಮೋದನೆಯೊಡನೆ ತನಿಖೆ ನಡೆಸುತ್ತಿರುವ ಪೋಲೀಸ್ ಅಧಿಕಾರಿಯು ಮಾಡಿದ ಲಿಖಿತ ವರದಿಯ ಮೇಲೆ ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದ ಯಾವೊಬ್ಬ ವ್ಯಕ್ತಿಯು ತಲೆಮರೆಸಿಕೊಂಡಿದ್ದಾನೆಂದು ಅಥವಾ ತಾನು ದಸ್ತಗಿರಿಯಾಗದಂತೆ ತನ್ನನ್ನು ತಾನು ಬಚ್ಚಿಟ್ಟುಕೊಂಡಿದ್ದಾನೆಂದು ಯಾವುದೇ ವಿಶೇಷ ನ್ಯಾಯಾಲಯಕ್ಕೆ ನಂಬಲು ಕಾರಣವಿದ್ದರೆ, ಅಂಥ ನ್ಯಾಯಾಲಯವು, ಸಂಹಿತೆಯ ೮೨ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಂದು ಲಿಖಿತ ಉದ್ಘೋಷಣೆಯನ್ನು ಹೊರಡಿಸಿ ಅಂಥ ಲಿಖಿತ ಉದ್ಘೋಷಣೆಯ ಪ್ರಕಟಣೆಯ ಹದಿನೈದು ದಿನಗಳಿಗೆ ಕಡಿಮೆಯಲ್ಲದ ಆದರೆ ಮೂವತ್ತು ದಿನಗಳಿಗೆ ಮೀರದ ನಿರ್ದಿಷ್ಟ ಅವಧಿಯಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಆತನು ಹಾಜರಾಗುವಂತೆ ಅಗತ್ಯಪಡಿಸಬಹುದು:

ಪರಂತು, ತನಿಖೆ ನಡೆಸುತ್ತಿರುವ ಪೋಲೀಸ್ ಅಧಿಕಾರಿಯು ತಲೆ ಮರೆಸಿಕೊಂಡ ಅಥವಾ ಬಚ್ಚಿಟ್ಟುಕೊಂಡ ಅಪರಾಧಿಯನ್ನು ಅಂಥ ವ್ಯಕ್ತಿಯ ವಿರುದ್ಧ ಅಪರಾಧವನ್ನು ನೋಂದಾಯಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯವರೆಗೆ ಬಂಧಿಸಲು ಅಸಮರ್ಥನಾದರೆ, ಸದರಿ ಅವಧಿಯ ಮುಕ್ತಾಯದ ತರುವಾಯ ಆ ಅಧಿಕಾರಿಯು ಉದ್ಘೋಷಣೆಯನ್ನು ಹೊರಡಿಸುವ ಸಲುವಾಗಿ ವಿಶೇಷ ನ್ಯಾಯಾಲಯಕ್ಕೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು.

(ಬಿ) (ಎ) ಖಂಡದ ಅಡಿಯಲ್ಲಿ ಉದ್ಘೋಷಣೆಯನ್ನು ಹೊರಡಿಸುವ ವಿಶೇಷ ನ್ಯಾಯಾಲಯವು ಯಾವುದೇ ಸಮಯದಲ್ಲಿ, ಉದ್ಘೋಷಿತ ವ್ಯಕ್ತಿಗೆ ಸೇರಿದ ಯಾವುದೇ ಚರ ಅಥವಾ ಸ್ಥಿರ ಅಥವಾ ಎರಡು ರೀತಿಯ ಸ್ವತ್ತಿನ ಜಪ್ತಿಗಾಗಿ ಆದೇಶಿಸಬಹುದು ಮತ್ತು ತದನಂತರ ಸಂಹಿತೆಯ ೮೩ರಿಂದ ೮೫ರ ವರೆಗಿನ ಪ್ರಕರಣಗಳ ಉಪಬಂಧಗಳು, ಅಂಥ ಜಪ್ತಿಯನ್ನು ಸಂಹಿತೆಯ ಅಡಿಯಲ್ಲಿ ಮಾಡಲಾಗಿದ್ದರೆ ಹೇಗೋ ಹಾಗೆ ಅಂಥ ಜಪ್ತಿಗೆ ಅನ್ವಯಿಸತಕ್ಕದ್ದು.

(ಸಿ) ಜಪ್ತಿಯ ದಿನಾಂಕದಿಂದ ಆರು ತಿಂಗಳೊಳಗೆ, ಸಂಹಿತೆ ೮೫ನೇ ಪ್ರಕರಣದ (೨)ನೇ ಉಪ ಪ್ರಕರಣದ ಅಡಿಯಲ್ಲಿ ಯಾವ ವ್ಯಕ್ತಿಯ ಸ್ವತ್ತು ರಾಜ್ಯ ಸರ್ಕಾರದ ವಿಲೆಯಲ್ಲಿದೆಯೋ ಅಥವಾ ಇದ್ದಿತೋ ಅವನು ಸ್ವಇಚ್ಛೆಯಿಂದ ಹಾಜರಾದರೆ ಅಥವಾ ಅವನನ್ನು ದಸ್ತಗಿರಿ ಮಾಡಿದ್ದರೆ ಮತ್ತು ಯಾವ ವಿಶೇಷ ನ್ಯಾಯಾಲಯದ ಆದೇಶದ ಮೇಲೆ ಸ್ವತ್ತಿನ ಜಪ್ತಿ ಮಾಡಲಾಗಿದೆಯೋ ಅದರ ಮುಂದೆ ಅಥವಾ ಅಂಥ ನ್ಯಾಯಾಲಯವು ಯಾವ ನ್ಯಾಯಾಲಯಕ್ಕೆ ಅಧೀನವಾಗಿದೆಯೋ ಆ ನ್ಯಾಯಾಲಯದ ಮುಂದೆ ಹಾಜರುಪಡಿಸಿದರೆ ಮತ್ತು ಅವನು ದಸ್ತಗಿರಿಯಾಗುವುದನ್ನು ತಪ್ಪಿಸಲು ತಲೆಮರೆಸಿಕೊಂಡಿಲ್ಲವೆಂದು ಅಥವಾ ಬಚ್ಚಿಟ್ಟುಕೊಂಡಿಲ್ಲವೆಂದು ಮತ್ತು ಅಂಥ ಉದ್ಘೋಷಿತ ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ತಾನು ಹಾಜರಾಗಲು ಅನುವಾಗುವಂತೆ ಅಂಥ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ ಅಂಥ ಸ್ವತ್ತನ್ನು ಅಥವಾ ಅದನ್ನು ಮಾರಾಟ ಮಾಡಿದ್ದರೆ ಅದರ ನಿವ್ವಳ ಉತ್ಪತ್ತಿಯನ್ನು ಮತ್ತು ಸ್ವತ್ತಿನ ಉಳಿದ ಭಾಗವನ್ನು, ಜಪ್ತಿಯ ಪರಿಣಾಮವಾಗಿ ಉಂಟಾದ ಎಲ್ಲಾ ವೆಚ್ಚಗಳನ್ನು ಪೂರೈಸಿದ ತರುವಾಯ ಆತನಿಗೆ ಒಪ್ಪಿಸತಕ್ಕದ್ದು..

**೨೨. ಸಂಹಿತೆಯ ಕೆಲವು ಉಪಬಂಧಗಳನ್ನು ಮಾರ್ಪಾಡು ಮಾಡಿ ಅನ್ವಯಿಸುವುದು.–** (೧) ಸಂಹಿತೆಯಲ್ಲಿ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ

ಪ್ರತಿಯೊಂದು ಅಪರಾಧವನ್ನು, ಸಂಹಿತೆಯ ೨ನೇ ಪ್ರಕರಣದ (ಸಿ) ಖಂಡದ ಅರ್ಥವ್ಯಾಪ್ತಿಯಲ್ಲಿ ಸಂಜ್ಞೇಯ ಅಪರಾಧವೆಂದು ಭಾವಿಸತಕ್ಕದ್ದು ಮತ್ತು ಆ ಖಂಡದಲ್ಲಿ ಪರಿಭಾಷಿಸಿದಂತೆ "ಸಂಜ್ಞೇಯ ಮೊಕದ್ದಮೆ" ತದನುಸಾರವಾಗಿ ಅರ್ಥೈಸತಕ್ಕದ್ದು.

(೨) ಈ ಅಧಿನಿಯಮದ ಅಡಿಯಲ್ಲಿ ದಂಡನೀಯ ಅಪರಾಧವನ್ನು ಒಳಗೊಂಡ ಒಂದು ಮೊಕದ್ದಮೆಯ ಸಂಬಂಧದಲ್ಲಿ, ಸಂಹಿತೆಯ ೧೬೭ನೇ ಪ್ರಕರಣವನ್ನು, (೨)ನೇ ಉಪ ಪ್ರಕರಣದ ಮಾರ್ಪಾಟುಗಳ ಷರತ್ತಿಗೊಳಪಟ್ಟು, ಅನ್ವಯಿಸತಕ್ಕದ್ದು;

(ಎ) "ಹದಿನೈದು ದಿನಗಳು" ಮತ್ತು "ಅರವತ್ತು ದಿನಗಳು" ಎಂಬ ಉಲ್ಲೇಖಗಳು ಬರುವ ಕಡೆಗಳಲ್ಲೆಲ್ಲ ಕ್ರಮವಾಗಿ "ಮೂವತ್ತು ದಿನಗಳು" ಮತ್ತು "ತೊಂಬತ್ತು ದಿನಗಳು" ಎಂದು ಅರ್ಥೈಸತಕ್ಕದ್ದು;

(ಬಿ) ಪರಂತುಕದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನಿರ್ದಿಷ್ಟಪಡಿಸಿದ ತೊಂಬತ್ತು ದಿನಗಳ ಅವಧಿಯೊಳಗೆ ತನಿಖೆಯನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, ಪಬ್ಲಿಕ್ ಪ್ರಾಸಿಕ್ಯೂಟರ್‌ನ ವರದಿಯ ಮೇಲೆ, ತನಿಖೆಯ ಪ್ರಗತಿಯನ್ನು ಮತ್ತು ತೊಂಬತ್ತು ದಿನಗಳ ಸದರಿ ಅವಧಿಯ ನಂತರವೂ ಅಪರಾದಿಯನ್ನು ಬಂಧಿಸಿಟ್ಟಿರಲು ನಿರ್ದಿಷ್ಟ ಕಾರಣಗಳನ್ನು ತಿಳಿಸುತ್ತಾ, ವಿಶೇಷ ನ್ಯಾಯಾಲಯವು ಅಂಥ ಅವಧಿಯನ್ನು ಒಂದುನೂರ ಎಂಬತ್ತು ದಿನಗಳಿಗೆ ವಿಸ್ತರಿಸತಕ್ಕದ್ದು".

(೩) ಸಂಹಿತೆಯ ೪೩೮ನೇ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧವನ್ನು ಎಸಗಿದ ಅಪಾದನೆಯ ಮೇಲೆ ಯಾವೊಬ್ಬ ವ್ಯಕ್ತಿಯ ಬಂಧನವನ್ನು ಒಳಗೊಂಡ ಯಾವುದೇ ಮೊಕದ್ದಮೆಯ ಸಂಬಂಧದಲ್ಲಿ ಅನ್ವಯಿಸತಕ್ಕದ್ದಲ್ಲ.

(೪) ಸಂಹಿತೆಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧ ಮಾಡಿರುವುದಾಗಿ ಆಪಾದಿತನಾದ ವ್ಯಕ್ತಿಯು, ಅಭಿರಕ್ಷೆಯಲ್ಲಿ ಇದ್ದರೆ, ಅವನನ್ನು ಜಾಮೀನಿನ ಮೇಲೆ ಅಥವಾ ಅವನದೇ ಬಾಂಡಿನ ಮೇಲೆ,-

(ಎ) ಅಂಥ ಬಿಡುಗಡೆಯ ಅರ್ಜಿಯನ್ನು ವಿರೋಧಿಸಲು ಪಬ್ಲಿಕ್ ಪ್ರಾಸಿಕ್ಯೂಟರನಿಗೆ ಅವಕಾಶವನ್ನು ನೀಡಿದ ಹೊರತು, ಮತ್ತು

(ಬಿ) ಪಬ್ಲಿಕ್ ಪ್ರಾಸಿಕ್ಯೂಟರನು ಅರ್ಜಿಯನ್ನು ವಿರೋಧಿಸಿದರೆ, ಅಂಥ ಅಪರಾಧದ ತಪ್ಪಿತಸ್ತನಲ್ಲವೆಂದು ಮತ್ತು ಆತನು ಜಾಮೀನಿನ ಮೇಲೆ ಇರುವಾಗ ಯಾವುದೇ ಅಪರಾಧವನ್ನು ಎಸಗುವ ಸಾಧ್ಯತೆ ಇಲ್ಲವೆಂದು ನಂಬಲು ಸಮಂಜಸವಾದ ಕಾರಣಗಳು ಇವೆ ಎಂದು ನ್ಯಾಯಾಲಯಕ್ಕೆ ಮನದಟ್ಟಾದ ಹೊರತು,

- ಬಿಡುಗಡೆ ಮಾಡತಕ್ಕದ್ದಲ್ಲ.

(೫) ಸಂಹಿತೆಯಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಪ್ರಶ್ನಿತ ಅಪರಾಧದ ದಿನದಂದು ಅಪರಾಧಿಯು ಈ ಅಧಿನಿಯಮದ ಅಡಿಯಲ್ಲಿಯ ಅಥವಾ ಇತರ ಯಾವುದೇ ಅಧಿನಿಯಮದ ಅಡಿಯಲ್ಲಿಯ ಅಪರಾಧದ ಸಂಬಂಧದಲ್ಲಿ ಜಾಮೀನಿನ ಮೇಲೆ ಇದ್ದುದಾಗಿ ನ್ಯಾಯಾಲಯವು ಗಮನಿಸಿದ್ದರೆ, ಅವನಿಗೆ ಜಾಮೀನನ್ನು ಮಂಜೂರು ಮಾಡತಕ್ಕದ್ದಲ್ಲ.

(೬) (೪)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಜಾಮೀನು ಮಂಜೂರಾತಿಗೆ ಸಂಬಂಧಿಸಿದ ಪರಿಮಿತಿಗಳು, ಸಂಹಿತೆಯ ಅಡಿಯಲ್ಲಿಯ ಅಥವಾ ಜಾಮೀನು ಮಂಜೂರಾತಿಗೆ ಸಂಬಂಧಿಸಿದ ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿಯ ಪರಿಮಿತಿಗಳಿಗೆ ಹೆಚ್ಚಿಗೆಯಾಗಿವೆ.

(೭) ಪೋಲೀಸ್ ಅಧಿಕಾರಿಯು ನ್ಯಾಯಾಂಗದ ಅಭಿರಕ್ಷೆಯಲ್ಲಿರುವ ಯಾವೊಬ್ಬ ವ್ಯಕ್ತಿಯನ್ನು ಪೂರ್ವ ಆಪಾದನಾಪೂರ್ವ ಅಥವಾ ಅಧಿವಿಚಾರಣಾ ಪೂರ್ವ ಪರಿಪ್ರಶ್ನೆಗಾಗಿ, ತನ್ನ ಅಭಿರಕ್ಷೆಗೆ ತೆಗೆದುಕೊಳ್ಳಲು ಬಯಸಿದರೆ, ಹಾಗೆ ಅಭಿರಕ್ಷೆಯನ್ನು ಕೋರಿದುದಕ್ಕೆ ಮತ್ತು ಪೋಲೀಸ್ ಅಭಿರಕ್ಷೆ ಕೋರುವಲ್ಲಿ ಯಾವುದೇ ವಿಳಂಬವಾಗಿದ್ದರೆ ಕೂಡ ಕಾರಣವನ್ನು ವಿವರಿಸುವ ಒಂದು ಲಿಖಿತ ಹೇಳಿಕೆಯನ್ನು ಸಲ್ಲಿಸತಕ್ಕದ್ದು.

**೨೩. ೩ನೇ ಪ್ರಕರಣದ ಅಡಿಯಲ್ಲಿಯ ಅಪರಾಧಗಳ ಸಂಬಂಧದಲ್ಲಿ ಪೂರ್ವ ಭಾವನೆ.-** (೧) ೩ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ವ್ಯವಸ್ಥಿತ ಅಪರಾಧಗಳಿಗೆ ಸಂಬಂಧಿಸಿಧ ಒಂದು ಅಪರಾಧದ ವ್ಯವಹರಣೆಯಲ್ಲಿ,- (ಎ)

ಕಾನೂನು ಬಾಹಿರ ಶಸ್ತ್ರಗಳನ್ನು ಮತ್ತು ದಾಖಲೆಗಳು ಅಥವಾ ಕಾಗದಗಳನ್ನು ಒಳಗೊಂಡಂತೆ ಇತರ ಸಾಮಗ್ರಿಗಳನ್ನು ಅಪರಾಧಿಯ ಸ್ವಾಧೀನದಿಂದ ವಶಪಡಿಸಿಕೊಳ್ಳಲಾಗಿದೆಯೆಂದು ಮತ್ತು ಅಂಥ ಕಾನೂನು ಬಾಹಿರ ಶಸ್ತ್ರಗಳು ಮತ್ತು ದಾಖಲೆಗಳು ಅಥವಾ ಕಾಗದಗಳನ್ನು ಒಳಗೊಂಡ ಅಂಥ ಇತರ ಸಾಮಗ್ರಿಗಳು ಅಂಥ ಅಪರಾಧವನ್ನು ಮಾಡುವಲ್ಲಿ ಬಳಸಲಾಗಿದೆಯೆಂದು ನಂಬಲರ್ಹವಾದ ಕಾರಣಗಳಿವೆಯೆಂದು; ಅಥವಾ

(ಬಿ) ಒಬ್ಬ ತಜ್ಞನ ಸಾಕ್ಷ್ಯದಿಂದ, ಆಪಾದಿತನ ಬೆರಳೊತ್ತುಗಳು ಅಪರಾಧದ ಸ್ಥಳದಲ್ಲಿ ಅಥವಾ ಯಾವುದೇ ಕಾನೂನು ಬಾಹಿರ ಶಸ್ತ್ರಗಳ ಮೇಲೆ ಮತ್ತು ದಾಖಲೆಗಳು ಅಥವಾ ಕಾಗದ ಪತ್ರಗಳನ್ನು ಒಳಗೊಂಡಂತೆ ಇತರ ವಸ್ತುಗಳ ಮೇಲೆ ಮತ್ತು ಅಂಥ ಅಪರಾಧವನ್ನು ಮಾಡುವಲ್ಲಿ ಬಳಸಲಾದ ವಾಹನದ ಮೇಲೆ ಸಿಕ್ಕಿವೆಯೆಂದು,

– ರುಜುವಾತಾದರೆ,

ಇದಕ್ಕೆ ವ್ಯತಿರಿಕ್ತವಾಗಿ ರುಜುವಾತಾಗದ ಹೊರತು, ವಿಶೇಷ ನ್ಯಾಯಲಯವು ಅಪರಾಧಿಯು ಅಂಥ ಅಪರಾಧವನ್ನು ಎಸಗಿದ್ದಾನೆಂದು ಪೂರ್ವಭಾವನೆಯನ್ನು ಹೊಂದತಕ್ಕದ್ದು.

(೨) ೩ನೇ ಪ್ರಕರಣದ (೨)ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ವ್ಯವಸ್ಥಿತ ಅಪರಾಧದ ಒಂದು ಕಾನೂನು ವ್ಯವಹರಣೆಯಲ್ಲಿ ಅಪರಾಧಿಯು ವ್ಯವಸ್ಥಿತ ಅಪರಾದವನ್ನು ಎಸಗಿರುವುದಾಗಿ ಆಪಾದಿತನಾದ ವ್ಯಕ್ತಿಗೆ ಅಥವಾ ಅಪರಾಧ ಎಸಗಿರುವುದಾಗಿ ಯುಕ್ತವಾಗಿ ಶಂಕಿಸಲು ಕಾರಣವಿರುವ ವ್ಯಕ್ತಿಗೆ ಆರ್ಥಿಕ ಸಹಾಯವನ್ನು ಒದಗಿಸಿದ್ದಾನೆಂದು ರುಜುವಾತಾದರೆ ಇದಕ್ಕೆ ವ್ಯತಿರಿಕ್ತವಾಗಿ ರುಜುವಾತಾಗದ ಹೊರತು ವಿಶೇಷ ನ್ಯಾಯಾಲಯವು ಸದರಿ (೨)ನೇ ಉಪ ಪ್ರಕರಣದ ಅಡಿಯಲ್ಲಿ ಅಂಥ ವ್ಯಕ್ತಿಯು ಅಪರಾಧವನ್ನು ಎಸಗಿದ್ದಾನೆಂದು ಪೂರ್ವಭಾವನೆಯನ್ನು ಹೊಂದತಕ್ಕದ್ದು.

**೨೪. ಒಂದು ಅಪರಾಧದ ಸಂಜ್ಞೇಯತೆ ಮತ್ತು ತನಿಖೆ.–** (೧) ಸಂಹಿತೆಯಲ್ಲಿ ಏನೇ ಒಳಗೊಂಡಿದ್ದಾಗ್ಯೂ,–

(ಎ) ಈ ಧಿನಿಯಮದ ಅಡಿಯಲ್ಲಿ ವ್ಯವಸ್ಥಿತ ಅಪರಾಧದ ಒಂದು ಅಪರಾಧವನ್ನು ಎಸಗಲಾಗಿದೆ ಎಂಬ ಮಾಹಿತಿಯನ್ನು, ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್, ಇವರ ದರ್ಜೆಗೆ ಕಡಿಮೆಯಲ್ಲದ ಒಬ್ಬ ಪೋಲೀಸ್ ಅಧಿಕಾರಿಯ ಪೂರ್ವ ಅನುಮೋದನೆಯ ಹೊರತಾಗಿ, ಒಬ್ಬ ಪೋಲೀಸ್ ಅಧಿಕಾರಿಯು ದಾಖಲು ಮಾಡತಕ್ಕದ್ದಲ್ಲ;

(ಬಿ) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಒಂದು ಅಪರಾಧದ ತನಿಖೆಯನ್ನು ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಇವರ ದರ್ಜೆಗೆ ಕಡಿಮೆ ದರ್ಜೆಯ ಒಬ್ಬ ಪೋಲೀಸ್ ಅಧಿಕಾರಿಯು ನಡೆಸತಕ್ಕದ್ದಲ್ಲ.

(೨) ವಿಶೇಷ ನ್ಯಾಯಾಲಯವು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧದ ಸಂಜ್ಞೇಯತೆಯನ್ನು, ಅಪರ ಪೋಲೀಸ್ ಮಹಾ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಪೋಲೀಸ್ ಅಧಿಕಾರಿಯ ಪೂರ್ವ ಮಂಜೂರಾತಿಯ ಹೊರತು. ಕೈಗೊಳ್ಳತಕ್ಕದ್ದಲ್ಲ.

**೨೫. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾದ ಲೋಕ ನೌಕರರಿಗೆ ದಂಡನೆ.–** (೧) ಲೋಕ ನೌಕರನಾಗಿರುವ ಯಾವೊಬ್ಬ ವ್ಯಕ್ತಿಯು ವ್ಯವಸ್ಥಿತ ಅಪರಾಧಿ ಕೂಟದ ಒಬ್ಬ ಸದಸ್ಯನು ಯಾವುದೇ ಅಪರಾಧವನ್ನು ಎಸಗುವ ಪೂರ್ವದಲ್ಲಿ ಅಥವಾ ನಂತರ, ೨ನೇ ಪ್ರಕರಣದ (ಸಿ) ಖಂಡದಲ್ಲಿ ಪರಿಭಾಷಿಸದಂತೆ ವ್ಯವಸ್ಥಿತ ಅಪರಾಧಗಳನ್ನು ಎಸಗುವಲ್ಲಿ ಯಾವುದೇ ರೀತಿಯ ಸಹಾಯ ಅಥವಾ ಬೆಂಬಲವನ್ನು ನೀಡಿದರೆ ಅಥವಾ ಈ ಅಧ್ಯಾದೇಶದ ಅಡಿಯಲ್ಲಿ ಕಾನೂನುಬದ್ಧ ಕ್ರಮ ಕೈಗೊಳ್ಳುವಲ್ಲಿ ವಿಮುಕನಾದರೆ ಅಥವಾ ಯಾವುದೇ ನ್ಯಾಯಾಲಯದ ಅಥವಾ ಈ ಸಂಬಂಧದ ಉನ್ನತ ಪೋಲೀಸು ಆದಿಕಾರಿಯ ನಿರ್ದೇಶನಗಳನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ ಅವನು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಯಾವುದೇ ಸ್ವರೂಪದ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿಸತಕ್ಕದ್ದು.

**೨೬. ಅಧ್ಯಾರೋಹಿ ಪರಿಣಾಮಗಳು.–** ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮದ ಅಥವಾ ಅಂಥ ಯಾವುದೇ ನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದ, ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಲ್ಲಿ ಅವುಗಳಿಗೆ ಅಸಂಗತವಾದುದೇನೇ ಒಳಗೊಂಡಿದ್ದಾಗ್ಯೂ, ಪರಿಣಾಮವನ್ನು ಹೊಂದಿರತಕ್ಕದ್ದು.

**೨೭. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ಅಂಥ ಯಾವುದೇ ನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದ

ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ವಿರುದ್ಧ ಅಥವಾ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರಿಯ ವಿರುದ್ಧ ದಾವೆ ಅಥವಾ ಕಾನೂನು ವ್ಯವಹರಣೆಯನ್ನು ನಡೆಸತಕ್ಕದ್ದಲ್ಲ.

**೨೮. ತಡೆದು ಪ್ರತ್ಯೇಕಿಸುವ ಕ್ರಮಗಳ ವಾರ್ಷಿಕ ವರದಿ.–** (೧) ರಾಜ್ಯ ಸರ್ಕಾರವು:–

(i) ಯಾವ ಪೋಲೀಸು ಇಲಾಖೆಯಲ್ಲಿ ಕಾನೂನು ವ್ಯವಹರಣೆಗಳನ್ನು ಆರಂಭಿಸಲಾಗಿದೆಯೋ ತಡೆದು ಪ್ರತ್ಯೇಕಿಸುವುದನ್ನು ಅಧಿಕೃತಗೊಳಿಸುವ ಬಗ್ಗೆ ಅದರ ಸಕ್ಷಮ ಪ್ರಾಧಿಕಾರವು ಸ್ವೀಕರಿಸಿದ ಅರ್ಜಿಗಳ ಸಂಖ್ಯೆ;

(ii) ಅನುಮತಿಸಲಾದ ಅಥವಾ ತಿರಸ್ಕರಿಸಲಾದ ಅಂಥ ಅರ್ಜಿಗಳ ಸಂಖ್ಯೆ;

(iii) ತುರ್ತು ಸನ್ನಿವೇಶಗಳಲ್ಲಿ ಕೈಗೊಂಡ ತಡೆದು ಪ್ರತ್ಯೇಕಿಸುವ ಕ್ರಮಗಳ ಮತ್ತು ಅಂಥ ವಿಷಯಗಳಲ್ಲಿ ಮಂಜೂರು ಮಾಡಿದ ಅಥವಾ ತಿರಸ್ಕರಿಸಿದ ಘಟನಾ ನಂತರದ ಕಾರ್ಯಕ್ಕೆ ಸಂಬಂಧಿಸಿದ ಅಧಿಕಾರ ನೀಡಿಕೆಗಳು ಅಥವಾ ಅನುಮೋದನೆಗಳ ಸಂಖ್ಯೆ;

(iv) ಅಂಥ ತಡೆದು ಪ್ರತ್ಯೇಕಿಸುವ ಕ್ರಮಗಳ ಆಧಾರದ ಮೇಲೆ ಪ್ರಾರಂಭಿಸಿದ ಕಾನೂನು ವ್ಯವಹರಣೆಗಳ ಮತ್ತು ಅಂಥ ಅಧಿಕೃತಗೊಳಿಸಿದ ತಡೆದು ಪ್ರತ್ಯೇಕಿಸುವ ಕ್ರಮಗಳ ಉಪಯುಕ್ತತೆ ಮತ್ತು ಪ್ರಾಮುಖ್ಯತೆಯ ಸಾಮಾನ್ಯ ನಿರ್ಧರಣೆಯ ವಿವರಣಾತ್ಮಕ ಹೇಳಿಕೆಯೊಡನೆ ಅಂಥ ತಡೆದು ಪ್ರತ್ಯೇಕಿಸುವ ಪರಿಣಾಮವಾಗಿ ಅಪರಾಧ ನಿರ್ಣಯವಾದವುಗಳ ಸಂಖ್ಯೆ, ಇವುಗಳ ಪೂರ್ಣ ವಿವರಗಳನ್ನು ಒಳಗೊಂಡಂತೆ ಒಂದು ವಾರ್ಷಿಕ ವರದಿಯನ್ನು ತಯಾರಿಸುವಂತೆ ಮಾಡತಕ್ಕದ್ದು.

(೨) ರಾಜ್ಯ ಸರ್ಕಾರವು, ಅಂಥ ವಾರ್ಷಿಕ ವರದಿಯನ್ನು ಪ್ರತಿ ಕ್ಯಾಲೆಂಡರ್ ವರ್ಷದ ಮುಕ್ತಾಯದ ಮೂರು ತಿಂಗಳ ಒಳಗೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ವಾರ್ಷಿಕ ವರದಿಯಲ್ಲಿ ಯಾವುದೇ ವಿಷಯವನ್ನು ಸೇರಿಸುವುದರಿಂದ ರಾಜ್ಯದ ಭದ್ರತೆಗೆ ಅಥವಾ ಯಾವುದೇ ವ್ಯವಸ್ಥಿತ ಅಪರಾಧವನ್ನು ನಿವಾರಿಸುವುಕ್ಕೆ ಅಥವಾ ಪತ್ತೆಹಚ್ಚುವುದಕ್ಕೆ ಪ್ರತಿಕೂಲವಾಗಬಹುದೆಂಬ ಅಭಿಪ್ರಾಯವನ್ನು ಹೊಂದಿದ್ದರೆ, ರಾಜ್ಯ ಸರ್ಕಾರವು ಅಂಥ ವಿಷಯವನ್ನು ವಾರ್ಷಿಕ ವರದಿಯಲ್ಲಿ ಸೇರಿಸದೆ ಬಿಟ್ಟುಬಿಡಬಹುದು.

**೨೯. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ.–** ಉಚ್ಚ ನ್ಯಾಯಾಲಯವು, ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ, ವಿಶೇಷ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪ ಬಂಧಗಳನ್ನು ನೆರವೇರಿಸುವುದಕ್ಕಾಗಿ, ತಾನು ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ನಿಯಮಗಳನ್ನು ರಚಿಸಬಹುದು.

**೩೦. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (೧) ೨೯ನೇ ಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವ [೧][ಉಚ್ಚ ನ್ಯಾಯಾಲಯದ ಅಧಿಕಾರಿಗಳಿಗೆ ಪ್ರತಿಕೂಲವಾಗದಂತೆ][೧], ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಅಧಿಸೂಚನೆಯನ್ನು ಹೊರಡಿಸುವ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

೧. ತಿದ್ದೋಲೆ ಸಂಖ್ಯೆ: ಸಂವ್ಯಶಾಇ ೫೩ ಶಾಸನ ೨೦೦೦, ದಿನಾಂಕ: ೭.೧.೨೦೦೨

(೨) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು , ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನದ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಉಭಯ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಅಂತಹ ತೀರ್ಮಾನವನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಅಂತಹ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಅದು ಹಾಗೆ ಮಾರ್ಪಾಟಾದ ರೂಪದಲ್ಲಿ

ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು , ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ , ಆದಾಗ್ಯೂ ಅಂತಹ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾದಕವಾಗತಕ್ಕದ್ದಲ್ಲ.